ಸಂಸ್ಕೃತ - ಸಂಸ್ಕೃತಿ - ಸಂಪತ್ತು ಪುಸ್ತಕ ಮಾಲೆ ೩

ಜಯದೇವನ ಗೀತಗೋವಿಂದ

ಪ್ರೊ|| ಎಸ್.ಕೆ. ರಾಮಚಂದ್ರರಾವ್

ಎಂ.ಪಿ. ಬಿರ್ಲಾ ಪ್ರತಿಷ್ಠಾನ
ಬೆಂಗಳೂರು ಕೇಂದ್ರ
ರೇಸ್‌ಕೋರ್ಸ್ ರಸ್ತೆ, ಬೆಂಗಳೂರು – 560 001

ಸಂಸ್ಕೃತ - ಸಂಸ್ಕೃತಿ - ಸಂಪತ್ತು ಪುಸ್ತಕ ಮಾಲೆ ೩

ಜಯದೇವನ
ಗೀತಗೋವಿಂದ

ಪ್ರೊ|| ಸಾ. ಕೃ. ರಾಮಚಂದ್ರರಾವ್

ಎಂ.ಪಿ. ಬಿರ್ಲಾ ಪ್ರತಿಷ್ಠಾನ
ಬೆಂಗಳೂರು ಕೇಂದ್ರ
ರೇಸ್‌ಕೋರ್ಸ್ ರಸ್ತೆ, ಬೆಂಗಳೂರು - 560 001

Jayadevana Geethagovinda - A book on Jayadeva's Gitagovinda. Published by M.P. Birla Foundation, Bangalore Kendra, Race Course Road, Bangalore - 560 001.

Typeset : Viswas Services

Printed at : The Bangalore Press

Pages : 65

First Edition : - 2000.

© Author

Price : Rs.

For copies contact :
PUSTAK BHARATHI
Bharatiya Vidya Bhavan
Race Course Road, Bangalore - 560 001.

ಕವಿ

ಶೃಂಗಾರ ಪ್ರಧಾನವಾದ ಈ ಖಂಡಕಾವ್ಯದ ರಚಯಿತೃ ಜಯದೇವನ ಜೀವಿತವೇ ಒಂದು ಕಾವ್ಯವೆಂದು ಕವಿಸಮಯ. ಆದರೆ ಈ ಕವಿಯ ವಿಚಾರವಾಗಿ ನಿಖರವಾದ ವಿವರ ಅಷ್ಟಾಗಿ ದೊರೆಯದು. ಕೃಷ್ಣಕರ್ಣಾಮೃತವನ್ನು ರಚಿಸಿದ ಲೀಲಾಶುಕನೇ (1250-1300) ಜಯದೇವನಾಗಿ ಜನ್ಮ ತಳೆದನೆಂದು ಒಂದು ನಂಬಿಕೆ. ಇವನ ವೈಷ್ಣವಧರ್ಮವನ್ನೇ ಚೈತನ್ಯನು ಬಂಗಾಳಕ್ಕೆ ಒಯ್ದದ್ದು.

ಗೀತಗೋವಿಂದದ ವ್ಯಾಖ್ಯಾನಗಳಾದ ಶಂಕರಮಿಶ್ರನ 'ರಸಮಂಜರೀ', ರಾಣಾಕುಂಭನ 'ರಸಿಕ ಪ್ರಿಯಾ' ಮತ್ತು 'ಭಕ್ತಮಾಲಾ' ಎಂಬ ಪೌರಾಣಿಕ ಗ್ರಂಥ; ಇಷ್ಟಲ್ಲದೆ ಜನಜನಿತವಾದ ಕಿಂ ವದಂತಿಗಳು, ಇಷ್ಟರ ಆಧಾರದ ಮೇಲೆ ಜಯದೇವನ ಜೀವಿತವನ್ನು ಹೆಣೆಯುತ್ತಾರೆ. ಉತ್ಪ್ರೇಕ್ಷೆಗಳನ್ನೂ, ಅಲಂಕರಣಗಳನ್ನೂ ಬಿಟ್ಟರೆ ಉಳಿಯುವ ವಿವರ ಇಷ್ಟು.

ಕ್ರಿಸ್ತಾಬ್ಧ ಹನ್ನೆರಡನೆಯ ಶತಮಾನದ ಅಂತ್ಯಭಾಗದಲ್ಲಿ ಜಯದೇವ ಹುಟ್ಟಿದ್ದು. ಅವನು ತೀರಿಕೊಂಡದ್ದು ಕ್ರಿಸ್ತಾಬ್ದ 1200ರಲ್ಲಿ ಎಂದೂ ಒಂದು ಉಲ್ಲೇಖವಿದೆ. ಪುಷ್ಯಮಾಸದ ಸಪ್ತಮೀ ತಿಥಿಯಂದು ಅವನ ಪುಣ್ಯದಿನವನ್ನಾಚರಿಸುವ ಪದ್ಧತಿಯೂ ಇದೆ.

ಈಗ ಒರಿಸ್ಸಾ ಎಂದು ಕರೆಸಿಕೊಳ್ಳುವ ಉತ್ಕಲ ದೇಶದಲ್ಲಿ ಜಗನ್ನಾಥಪುರಿಯ ಬಳಿ ಕಿಂದುಬಿಲ್ವ (ಅಥವಾ ಬಿಂದುವಿಲ್ವ) ಎಂಬ ಗ್ರಾಮದಲ್ಲಿ ಭೋಜದೇವ-ರಾಮಾದೇವಿ ಎಂಬ ಬ್ರಾಹ್ಮಣ ದಂಪತಿಗಳ ಮಗ. ಕಾವ್ಯದಲ್ಲೇ ಇದೊಂದು ಒಕ್ಕಣೆಯಿದೆ -

> "ಶ್ರೀಭೋಜದೇವಪ್ರಭವಸ್ಯ ರಾಮಾ
> ದೇವೀಸುತ ಶ್ರೀ ಜಯದೇವಕಸ್ಯ|
> ಪರಾಶರಾದಿಪ್ರಿಯವರ್ಗಕಂಠೇ
> ಶ್ರೀ ಗೀತಗೋವಿಂದಕವಿತ್ವಮಸ್ತು|| (12, 11)

ಸಹಜವಾಗಿಯೇ ಭಾವುಕವಾದ ಪ್ರಕೃತಿ ಎಳೆತನದ ಗೆಳೆಯನಾದ ಪರಾಶರ ಎಂಬ ರಸಿಕನ ಸಹವಾಸದಿಂದ ಉದ್ದೀಪ್ತವಾಯಿತು. ಉಪಲಬ್ಧವಾದ ಪಾಂಡಿತ್ಯದ ಪ್ರಭಾವದಿಂದ ಬಂಗಾಳದ ದೊರೆ ಲಕ್ಷ್ಮಣಸೇನನ ಆಸ್ಥಾನದಲ್ಲಿದ್ದ ಪಂಚರತ್ನಗಳಲ್ಲಿ ಒಂದಾದ. ಕೃಷ್ಣಭಕ್ತನಾದ

ಇವನಿಗೆ ಅನುರೂಪಳಾದ, ಸಹಕಾರಿಣಿಯಾದ ಹೆಂಡತಿ ಪದ್ಮಾವತಿಯ ಪ್ರೇರಕ ಶಕ್ತಿಯಿಂದ 'ಗೀತಗೋವಿಂದ' ಕಾವ್ಯ ಬೆಳಕು ಕಂಡಿತು. ಕಾವ್ಯದಲ್ಲೇ ಒಂದೆಡೆ ತನ್ನನ್ನು 'ಪದ್ಮಾವತೀಚರಣಚಾರಣ ಚಕ್ರವರ್ತೀ' ಎಂದು ಹೇಳಿಕೊಂಡು ಪತ್ನಿಯ ಪ್ರಭಾವವನ್ನು ಸ್ಮರಿಸಿಕೊಂಡಿದ್ದಾನೆ.

'ಜಯ ಪದ್ಮಾವತೀರಮಣ ಜಯ ದೇವತಾಕವಿಭಾರತೀ ಭಣಿತ - ಮತಿಶಾಂತಂ' (10, 19)

ಕೃಷ್ಣನ ಮೂರ್ತಿಯೆದುರು ಇವರಿಬ್ಬರೂ ಹಾಡಿಕೊಂಡು ಕುಣಿಯುತ್ತಿದ್ದರು; ಭಕ್ತಿಯ ಭರದಲ್ಲಿ ಕೃಷ್ಣನ ಆರಾಧನೆ ಇಬ್ಬರಿಂದಲೂ ನಡೆಯುತ್ತಿದ್ದಿತು ಎಂದು ಭಕ್ತಮಾಲೆಯ ಒಕ್ಕಣೆಯಿದೆ -

> 'ನೃತ್ಯಂತೌ ಚಾಪಿ ಗಾಯಂತೌ
> ಶ್ರೀಕೃಷ್ಣಾರ್ಚನತತ್ಪರೌ ।'
> 'ಗಾಯಂಸ್ತು ದೇವದೇವಾಗ್ರೇ
> ಪತ್ನ್ಯಾ ಸಹ ನನರ್ತ ಹ।'

ಇವರಿಬ್ಬರು ಒಡಗೂಡಿದ ವಿಚಾರವಾಗಿ ಅಲ್ಲಿಯೇ ಒಂದು ಕತೆ ಇದೆ. ಇದು ಕಲ್ಪನೆಯೇ ಇದ್ದೀತು; ಆದರೆ ಸ್ವಾರಸ್ಯವಾಗಿದೆ. ಜಗನ್ನಾಥಪುರಿಯ ಹತ್ತಿರವಿದ್ದ ಹಳ್ಳಿಯೊಂದರಲ್ಲಿ ದೇವಶರ್ಮನೆಂಬ ಬಡಬ್ರಾಹ್ಮಣನಿದ್ದನಂತೆ. ಅವನಿಗೆ ಮಕ್ಕಳಿರಲಿಲ್ಲ. ಜಗನ್ನಾಥನಲ್ಲಿ ಹರಕೆ ಹೊತ್ತು, ಮಗುವಾದರೆ ಜಗನ್ನಾಥನ ಊಳಿಗಕ್ಕೇ ಅದನ್ನು ಮುಡಿಪಿಡುವೆನೆಂದು ಬೇಡಿಕೊಂಡ. ಹೆಣ್ಣುಮಗುವಾಯಿತು. ಪದ್ಮಾವತಿಯೆಂದು ಹೆಸರಿಟ್ಟು ಬೆಳೆಸಿದ. ಹುಡುಗಿ ಬೆಳೆದ ಮೇಲೆ, ತಾನು ಜಗನ್ನಾಥದಲ್ಲಿ ಮಾಡಿಕೊಂಡ ಹರಕೆಯ ನೆನಪಾಗಿ ಅವನು ಜಗನ್ನಾಥನ ದೇವಾಲಯಕ್ಕೆ ಅವಳನ್ನು ಕರೆದೊಯ್ದ. ರಾತ್ರಿ ಅಲ್ಲಿ

ತಂಗಿರುವಾಗ ಅವನಿಗೊಂದು ಕನಸಾಯಿತು; ದೇವಾಲಯದ ಹೊರಗೆ ಕುಳಿತಿದ್ದ ಜಯದೇವನೊಂದಿಗೆ ಅವಳ ಮದುವೆ ಮಾಡಿಕೊಡೆಂದು. ಮರುದಿನ ಎದ್ದು ಜಯದೇವನನ್ನು ಹುಡುಕಿ, ತನ್ನ ಮಗಳನ್ನು ಮದುವೆಯಾಗೆಂದು ಕೇಳಿಕೊಂಡ; ತನಗಾದ ಕನಸನ್ನೂ ತಿಳಿಸಿದ. ಆದರೆ ಜಯದೇವನು ತಾನು ಬಡವನೆಂದೂ, ಮದುವೆ ಮಾಡಿಕೊಳ್ಳುವ ಬಯಕೆ ತನಗಿಲ್ಲವೆಂದೂ ಹೇಳಿಬಿಟ್ಟ. ದೇವಶರ್ಮ ಎಷ್ಟು ಬಗೆಯಾಗಿ ಬಲವಂತಮಾಡಿದರೂ ಅವನು ಒಪ್ಪಲಿಲ್ಲ.

ಕಡೆಗೆ ದೇವಶರ್ಮನು ದೇವರ ಅಣತಿಯನ್ನು ಮನ್ನಿಸುವೆನೆಂದು ತಿಳಿಸಿ, ಪದ್ಮಾವತಿಯನ್ನು ಜಯದೇವನ ಬಳಿಯೇ ಬಿಟ್ಟು ತನ್ನ ಹಳ್ಳಿಗೆ ಹೊರಟುಹೋದ. ಪದ್ಮಾವತಿಯೂ ಜಯದೇವನ ಬಳಿಯೇ ಕುಳಿತುಬಿಟ್ಟಳು. ಜಯದೇವನಿಗೆ ಏನು ಮಾಡುವುದೆಂದು ತೋಚದಾಯಿತು. ತಂದೆಯ ಮನೆಗೆ ಹಿಂದಿರುಗೆಂದು ಅವನು ಎಷ್ಟು ಹೇಳಿದರೂ ಅವಳು ಕೇಳಲಿಲ್ಲ. 'ನಿಮಗೆ ನನ್ನನ್ನು ನನ್ನ ತಂದೆ ಒಪ್ಪಿಸಿಯಾಗಿದೆ; ಭಗವದಿಚ್ಛೆಯೂ ಅದೇ ಆಗಿದೆ.

ಈಗ ನಿಮ್ಮನ್ನು ಬಿಟ್ಟು ನಾನೆಲ್ಲಿಯೂ ಹೋಗಲಾರೆ' ಎಂದುಬಿಟ್ಟಳು. ಸರಿ, ಜಯದೇವನೂ ಅವಳ ಮನೋದಾರ್ಢ್ಯವನ್ನು ಮೆಚ್ಚಿಕೊಂಡು ಅವಳನ್ನು ವಿಧಿವತ್ತಾಗಿ ಮದುವೆಯಾಗಲೊಪ್ಪಿದ. ದಂಪತಿಗಳ ಪ್ರೇಮಜೀವನ ಆರಂಭವಾದದ್ದು ಹೀಗೆ. ಜಗನ್ನಾಥನಲ್ಲಿ ಇವರಿಬ್ಬರ ಸೇವೆ ಸಂದಿತು.

ಕಾವ್ಯ

ಜಯದೇವನ ಕೃತಿಗಳಲ್ಲಿ ಉಳಿದಿರುವುದು ಇದೊಂದು.

'ಕಾರಕವಾದ', 'ರತಿ ಮಂಜರೀ' ಮತ್ತು 'ತತ್ತ್ವಚಿಂತಾಮಣಿ' ಎಂಬ ಕೃತಿಗಳೂ ಅವನವೇ. 'ಪ್ರಸನ್ನರಾಘವ' ಮತ್ತು 'ಚಂದ್ರಾಲೋಕ' ಎಂಬ ಎರಡು ಗ್ರಂಥಗಳನ್ನು ಬರೆದ ಜಯದೇವನೆಂಬುವನು ಬೇರೆಯವನು. ಗೀತಗೋವಿಂದವನ್ನು ಕವಿಯು 'ಶೃಂಗಾರ ಮಹಾಕಾವ್ಯ' ಎಂದು ಕರೆದುಕೊಂಡಿದ್ದಾನೆ. ಆಲಂಕಾರಿಕರ ದೃಷ್ಟಿಯಲ್ಲಿ ಇದು ಉತ್ಪ್ರೇಕ್ಷೆ; ಮಹಾಕಾವ್ಯಗಳಿಗಿರಬೇಕಾದ ಅಷ್ಟಾದಶ ಲಕ್ಷಣಗಳಲ್ಲಿ ಸರಿಯಾಗಿ ನಾಲ್ಕೂ ಈ ಕಾವ್ಯದಲ್ಲಿಲ್ಲ. ಶೃಂಗಾರವೊಂದೇ ರಸ; ವರ್ಣನೆಗೆ ಮಧುಮಾಸವೊಂದೇ ಮಾಸ; ಯಮುನಾ ತೀರ ಬಿಟ್ಟರೆ ಕವಿಗೆ ಪ್ರಕೃತಿಯೇ ಇಲ್ಲ; ರಾಧಾಕೃಷ್ಣರ ವಿರಹ, ಮಿಲನಗಳಷ್ಟೇ ವಸ್ತು. ಹೆಚ್ಚೆಂದರೆ ಇದನ್ನು 'ಖಂಡಕಾವ್ಯ' ಎನ್ನಬಹುದು. ಕವಿಯೇ ಇದನ್ನು ಪ್ರಬಂಧವೆಂದು ಕರೆದುಕೊಂಡಿದ್ದಾನೆ.

> 'ವಾಗ್ದೇವತಾಚರಿತಚಿತ್ರಿತಚಿತ್ತ ಸದ್ಮಾ
> ಪದ್ಮಾವತೀಚರಣಚಾರಣಚಕ್ರವರ್ತೀ।
> ಶ್ರೀ ವಾಸುದೇವರತಿಕೇಳಿಕಥಾಸಮೇತ
> ಮೇತಂ ಕರೋತಿ ಜಯದೇವಕವಿಃ ಪ್ರಬಂಧಂ॥

ಪ್ರಬಂಧವೆನ್ನುವುದು ಗೇಯಪ್ರಕಾರ. ಗೀತಗೋವಿಂದಕ್ಕೆ ಗಾನಕ್ರಮವನ್ನು ವ್ಯವಸ್ಥೆ ಮಾಡಿದ ರಾಣಾಕುಂಭನೂ 'ಪ್ರತ್ಯಜ್ಞಾಯಿ ಪ್ರಬಂಧೋ ಜಯದೇವೇನ ಧೀಮತಾ" ಎಂದೇ ಹೇಳಿರುವುದನ್ನು ಗಮನಿಸಬೇಕು.

ಗೀತಗೋವಿಂದದಲ್ಲಿ ಇಪ್ಪತ್ತುನಾಲ್ಕು ಗೇಯ ಪದ್ಯಗಳ ಹನ್ನೆರಡು ಸರ್ಗಗಳು, ಮಧ್ಯೆ ಹಲವಾರು ಸಂಯೋಜನಾ ಶ್ಲೋಕಗಳು. ಇದರಲ್ಲಿ

ಕಥೆಯೇನೂ ಇಲ್ಲ, ಅಷ್ಟಾಗಿ ಕಥನವೂ ಇಲ್ಲ, ವಿಶಿಷ್ಟ ಪ್ರಸಂಗವರ್ಣನೆಯೂ ಇಲ್ಲ. ಇಡೀ ಕಾವ್ಯದಲ್ಲಿ ಮಾತಾಡುವವರು ಮೂರೇ ಮಂದಿ - ಕೃಷ್ಣ ರಾಧೆ, ರಾಧೆಯ ಸಖಿ. ಇವರ ಮಾತು ಸಂಭಾಷಣೆಯ ರೂಪದಲ್ಲೂ ಅಷ್ಟಾಗಿ ಇಲ್ಲ; 'ಸ್ವಗತ'ಗಳಂತೆ ಒಬ್ಬೊಬ್ಬರ ಮಾತೂ. ಪ್ರತಿಯೊಂದು ಸರ್ಗವೂ ಇವರಲ್ಲಿ ಒಬ್ಬರ ಮಾತು. ಕಾವ್ಯದ ಗಮನಕ್ರಿಯೆಗೆ ಸಹಕಾರಿಯಾಗಿ ಸರ್ಗಗಳ ನಡುವೆ ಶ್ಲೋಕಗಳುಂಟು.

ಕಾವ್ಯದ ಇಡೀ ಗತಿಯು ಹನ್ನೆರಡು ಸರ್ಗಗಳಲ್ಲಿ ಅಡಕವಾಗಿ ನಡೆದಿದೆ. ಒಂದೊಂದು ಸರ್ಗದ ಹೆಸರೂ ಮನೋಜ್ಞ ಸುಂದರವಾಗಿದೆ - ಸಾಮೋದದಾಮೋದರ, ಅಕ್ಲೇಶ-ಕೇಶವ, ಮುಗ್ಧಮಧುಸೂದನ, ಸ್ನಿಗ್ಧ ಮಾಧವ, ಸಾಕಾಂಕ್ಷ ಪುಂಡರೀಕಾಕ್ಷ, ಸೋತ್ಕಂಠ ವೈಕುಂಠ, ನಾಗನಾರಾಯಣ, ವಿಲಕ್ಷ್ಯ ಲಕ್ಷ್ಮೀಪತಿ, ಮುಗ್ಧ ಮುಕುಂದ, ಚತುರ ಚತುರ್ಭುಜ, ಸಾನಂದ ಗೋವಿಂದ, ಸುಪ್ರೀತ ಪೀತಾಂಬರ. ಸರ್ಗಗಳ ಅಭಿಧಾನವನ್ನು ನೋಡಿದರೆ ಕಾವ್ಯದ ಏಕೈಕ ನಾಯಕ ಕೃಷ್ಣ; ಅವನ ಸ್ವಭಾವ ಧೀರಲಲಿತ. ಕಾವ್ಯದ ಕ್ರಿಯೆಯು ಕೃಷ್ಣನ ಶೃಂಗಾರ. ಕವಿಯೇ ಹೇಳುತ್ತಾನೆ - 'ಶ್ರೀ ವಾಸುದೇವ ರತಿಕೇಲಿಕಥಾಸಮೇತಂ, ಏತಂ ಕರೋತಿ ಜಯದೇವ ಕವಿಃ ಪ್ರಬಂಧಂ'. ಹತ್ತನೆಯ ಸರ್ಗದವರೆಗೆ ರಾಧಾಮಾಧವರ ವಿರಹ, ವಿಪ್ರಲಂಭ ಶೃಂಗಾರ; ಹನ್ನೊಂದನೆಯದರಲ್ಲಿ ಅವರದ್ದೇ ಸಂಭೋಗ ಶೃಂಗಾರ, ಅವರ ಸಮಾಗಮ.

ಇದು ಪ್ರಬಂಧವಾಗಿರುವುದರಿಂದ ಇದು ಕಲ್ಪನೆಯ ಕತೆಯೇ. ಅಮರ ಕೋಶಕಾರ ಹೇಳುವಂತೆ 'ಪ್ರಬಂಧಃ ಕಲ್ಪನಾ ಕಥಾ'. ಆದರೆ

ಗೇಯಗುಣವುಳ್ಳದ್ದು. ಭರತಕಲ್ಪಲತಾಮಂಜರಿಯು 'ತಾನಾದಿ ಸ್ವರಗೀತಾನಾಂ ಕ್ರಮಾದೂರ್ಧ್ವಮಂದ್ರೋ ಗತಿಃ' ಎಂದು ಪ್ರಬಂಧದ ಲಕ್ಷಣವನ್ನು ಹೇಳುತ್ತದೆ. ಕ್ರಮವಾಗಿ ಗಾನ, ಸ್ವರ, ಗೀತಗಳಿಂದ ಕೂಡಿದ್ದು, ಮೇಲೆ, ಕೆಳಗೆ ಅವುಗಳ ಗತಿಯಿರುವುದರಿಂದ ಪ್ರಬಂಧವು ವಿಶಿಷ್ಟವಾಗಿ ಗೇಯಪ್ರಕಾರವಾಗುತ್ತದೆ. ಮತ್ತು ಗೇಯಪ್ರಕಾರವನ್ನೂ 'ಚತುರ್ಭಿಃ ಪಂಚಭಿಃ ಷಡ್ಭಿಃ ಸರ್ವೈಃ ರಾಗನಿರೂಪಣಂ' ಎಂಬ ಲಕ್ಷಣವನ್ನೂ ಹೇಳಿದ್ದಾರೆ. ಇದರಲ್ಲಿ ಗೀತವೇ ಪ್ರಮುಖವಾದ ಭಾಗ. ಇದು ಶಬ್ದ ಮಾಧುರ್ಯದಿಂದ, ಸ್ವರರಾಗಗಳ ಬಳಕೆಯಿಂದ ಶ್ರುತಿಮಧುರವಾಗಿ ಮನೋಜ್ಞವಾಗಿರುತ್ತದೆ-

'ಅಷ್ಟಭಾಷಾಪದ್ಯೈರ್ಯುಕ್ತಂ ಶಬ್ದ ಝುಂಕಾರ ಸಂಯುತಂ ।
ಸ್ವರರಾಗೈಃ ಪ್ರಗಾಯಂತಿ ಗೀತಮಿತ್ಯಭಿಧೀಯತೇ॥

ಗೀತಗೋವಿಂದವು ಗೀತಪ್ರಧಾನವಾದ ಪ್ರಬಂಧ. ಇಪ್ಪತ್ತನಾಲ್ಕು ಅಷ್ಟಪದಿಗಳು ಮುಖ್ಯವಾಗಿ ಗೇಯ ಭಾಗಗಳು. ಹನ್ನೆರಡು ಸರ್ಗಗಳಲ್ಲಿ ಇವು ಅಡಕವಾಗಿವೆ. ಹನ್ನೆರಡು ಸರ್ಗಗಳು ಭಾಗವತಪುರಾಣದ ಹನ್ನೆರಡು ಕಾಂಡಗಳನ್ನೂ, ಇಪ್ಪತ್ತುನಾಲ್ಕು ಅಷ್ಟಪದಿಗಳು ಗಾಯತ್ರೀಮಂತ್ರದ ಇಪ್ಪತ್ತುನಾಲ್ಕು ಅಕ್ಷರಗಳನ್ನೂ ನೆನಪಿಗೆ ತರುತ್ತವೆ. ಹೀಗೆಂದೇ ಇದು 'ಸದ್ಗೀತ ಗೋವಿಂದ ಮಹಾಪ್ರಬಂಧ'ವಾಗಿರುವುದು. ಮಧುರ ಪೇಶಲ ಭಾವವಿರುವುದು ಗೀತಿ. ಭಾವಸಾಂದ್ರತೆಯಿರುವಲ್ಲಿ ಗೇಯತೆಯ ಲಕ್ಷಣ ತಾನಾಗಿ ಒಡಮೂಡಿ ಬರುತ್ತದೆ. ಅಲ್ಲಿನ ಒಂದೊಂದು ಸರ್ಗವನ್ನೂ ಒಂದೊಂದು ದೇಶ್ಯರಾಗದಲ್ಲಿ ಹಾಡುವ ವಾಡಿಕೆ ಉತ್ತರದ ಜನರಲ್ಲಿ

ಉಂಟು. ಕೆಲವು ಕರ್ಣಾಟಕ ಸಂಗೀತಕ್ಕೂ ಬಂದಿವೆ. ಇದರ ವಿಚಾರ ಮುಂದೆ ಬರುತ್ತದೆ.

ಹೀಗೆ ಈ ಕಾವ್ಯದಲ್ಲಿ ಶೃಂಗಾರರಸ ಪ್ರತಿಪಾದನೆಯು ವಿಶಿಷ್ಟವಾಗಿಯೆ ನಡೆದಿದೆ; ಪದಬಂಧ ಪ್ರಮುಖವಾದ ಪ್ರಬಂಧ, ಗೇಯ ಗುಣವನ್ನು ಧಾರಾಳವಾಗಿ ಅಳವಡಿಸಿಕೊಂಡಿದೆ. ಕೇವಲ ಕಾವ್ಯದೃಷ್ಟಿಯಿಂದ ನೋಡಿದರೆ, ಇದು ಅಷ್ಟೇನು ಉತ್ಕೃಷ್ಟವೆಂದು ಹೇಳಲಾಗದು. ಆದರೂ ಅದರ ಜನಪ್ರಿಯತೆ ಉಳಿದೆಲ್ಲ ಕಾವ್ಯಗಳಿಗಿಂತ ಹೆಚ್ಚಿನದು. ಇದಕ್ಕೆ ಕಾರಣ ಅದರಲ್ಲಿರುವ ಭಕ್ತಿನಿರ್ಭರತೆ. ಕವಿಯೇ ಇದನ್ನು ಕಂಡುಕೊಂಡಿದ್ದಾನೆ. ತಾನು ಪಂಡಿತಕವಿಯೆಂದೂ, ತನ್ನ ಇರವೆಲ್ಲವೂ ಕೃಷ್ಣನಲ್ಲಿಯೇ ಹೊಂದಿಕೊಂಡದ್ದೆಂದೂ, ವಿಷ್ಣುವಿನ ಉತ್ಕರ್ಷೆಯನ್ನು ಕಾಣಿಸುವುದೇ ತನ್ನ ಉದ್ದೇಶವೆಂದೂ, ಗೇಯಗುಣ ವಿಶಿಷ್ಟವಾದ ಈ ಕಾವ್ಯವನ್ನು ಪಂಡಿತರು ಅನುಭವಿಸಿ ಸಂತೋಷಪಡಬೇಕೆಂದೂ ಹೇಳಿಕೊಂಡಿದ್ದಾನೆ. ಅವನ ಎಣಿಕೆಯಲ್ಲಿ ಮೂರು ಗುಣಗಳು ಈ ಕಾವ್ಯದ ಹೆಗ್ಗಳಿಕೆಗೆ ಕಾರಣ - ಸಂಗೀತದ ಅನ್ವಯ, ವಿಷ್ಣುವಿನ ನೆನಹು ಮತ್ತು ಶೃಂಗಾರವನ್ನು ಸೊಗಸಾಗಿ ('ಗಾನೇ ವಿಷ್ಣುಭಕ್ತೌ ಶೃಂಗಾರರಸ ನಿರೂಪಣೇ ಚ ಯದೇತಸ್ಯ ಕಾವ್ಯಕೌಶಲಂ', ರಸಿಕಪ್ರಿಯಾ) -

'ಯದ್ ಗಾಂಧರ್ವಕಲಾಸು ಕೌಶಲ -
ಮನುಧ್ಯಾನಂ ಚ ಯದ್ ವೈಷ್ಣವಂ।
ಯಚ್ ಛೃಂಗಾರ ವಿವೇಕ ತತ್ತ್ವರಚನಾ
ಕಾವ್ಯೇಷು ಲೀಲಾಯಿತಂ।

ತತ್ ಸರ್ವಂ ಜಯದೇವಪಂಡಿತಕವೇಃ
ಕೃಷ್ಣೈ ಕತಾನಾತ್ಮನಃ।
ಸಾನಂದಾಃ ಪರಿಶೋಧಯಂತು
ಸುಧಿಯಂ ಶ್ರೀ ಗೀತ ಗೋವಿಂದತಃ॥' (12,10)

ಕವಿಯು ತನ್ನನ್ನು ಕೃಷ್ಣ ಭಕ್ತನೆಂದೇ ಗುರುತಿಸಿಕೊಂಡಿದ್ದಾನೆ. ತಾನು 'ಕೃಷ್ಣೈಕತಾನಾತ್ಮ', ಎಂದರೆ, ಕೃಷ್ಣನಲ್ಲೇ ನೆಟ್ಟ ಮನಸ್ಸುಳ್ಳವನು. (ಕೃಷ್ಣೇ ಏಕತಾನಃ ಏಕಾಗ್ರಚಿತ್ತಃ ಆತ್ಮಾ ಸ್ವರೂಪಂ ಯಸ್ಯ, ಎಂದು ರಸಿಕ ಪ್ರಿಯಾ ವ್ಯಾಖ್ಯಾನದ ವಿವರಣೆ) ಇದಕ್ಕೆ ಅನುಗುಣವಾಗಿಯೆ ಗಾಂಧರ್ವಕಲೆಯಲ್ಲಿ ಅವನ ಕೌಶಲ, ವಿಷ್ಣುವಿನ ಅನುಧ್ಯಾನ ಮತ್ತು ಶೃಂಗಾರ ಸಾರವನ್ನು ತಿಳಿಯಹೇಳುವ ಚಾತುರ್ಯ.

ಈ ಕಾವ್ಯದ ಧಾತ್ಯು-ಮಾತುಗಳೆರಡೂ ಆಕರ್ಷಕವಾದುವು. ಧಾತುವೇನೋ ಆಧ್ಯಾತ್ಮಭೂಯಿಷ್ಠವಾದದ್ದು (ಅನುಧ್ಯಾನಂ ಚಯದ್ ವೈಷ್ಣವಂ); ಶೃಂಗಾರರಸ ಇದಕ್ಕೆ ಹೊಂದಿಕೊಂಡು ಬಂದಿದೆ. 'ವಿವೇಕ' ಮತ್ತು 'ತತ್ತ್ವ' ಎಂಬೆರಡು ಪ್ರಕಾರಗಳನ್ನು ಕವಿಯೇ ಹೇಳಿದ್ದಾನೆ. ಮಾತಿನಲ್ಲಿ ಕಾವ್ಯಗುಣ ಮುಪ್ಪುರಿಗೊಂಡಿದೆ. ಸಂಗೀತ, ನೃತ್ಯ ಎರಡಕ್ಕೂ ಅನುಕೂಲವಾಗಬಲ್ಲ ಮಾತು. ಹೀಗಾಗಿ ಈ ಕಾವ್ಯವು ಭಕ್ತರಿಗೂ, ಭಾಗವತರಿಗೂ ರಸಿಕರಿಗೂ ರಸಜ್ಞರಿಗೂ ಸಮನಾಗಿಯೇ ಪ್ರಿಯವಾಗುತ್ತದೆ.

ವಸ್ತು

ಬ್ರಹ್ಮವೈವರ್ತ ಪುರಾಣದಲ್ಲಿ ಬರುವ ಒಂದು ಪ್ರಸಂಗವನ್ನು

ಅಧಿಕರಿಸಿ ಇಡೀ ಕಾವ್ಯ ರಚಿತವಾಗಿದೆಯೆಂಬ ಸೂಚನೆ ಮಂಗಳ ಶ್ಲೋಕದಲ್ಲಿದೆ. ನಂದ ರಾಧೆಗೆ ಹೇಳಿದನಂತೆ - "ಕತ್ತಲು ಕವಿದಿದೆ, ಮೋಡ ಮುಚ್ಚಿದೆ, ದಾರಿ ಕಾಣದು: ಕೃಷ್ಣ ಇನ್ನೂ ಎಳೆಯವನು, ಹೆದರಿಯಾನು. ರಾಧೆ, ನೀನೇ ಹೋಗಿ ಅವನನ್ನು ಮನೆ ಮುಟ್ಟಿಸಿ ಬಾ". ಇದು ಕವಿಸಮಯ. ನಂದನ ಮಾತಿನಂತೆ ಹೊರಟ ಕೃಷ್ಣ ರಾಧೆಯರು ಯಮುನಾ ನದಿಯ ದಡದಲ್ಲೇ ನಡೆದರು; ಅವರಿಬ್ಬರ ಪ್ರಕೃತಿ, ಹೊರಗಿನ ಪ್ರಕೃತಿ, ಸಂದರ್ಭ, ಏಕಾಂತ ಎಲ್ಲವೂ ಶೃಂಗಾರಕ್ಕೆ ಒಪ್ಪಿತು. ಮನೆಯನ್ನೂ ಜಗತ್ತನ್ನೂ ಮರೆತು ಗುಟ್ಟಾಗಿ ಅವರಿಬ್ಬರೂ ಪ್ರಣಯ ಪರವಶರಾದರು. 'ರಾಧಾ ಮಾಧವಯೋರ್ಜಯಂತಿ ಯಮುನಾಕೂಲೇ ರಹಃ ಕೇಲಯಃ' ಇದೇ ಕಾವ್ಯದ ವಸ್ತು.

ಇದರ ಸಂಸ್ಕೃತ ಮೂಲವನ್ನು ನೋಡಿದಾಗ ಪದಬಂಧದ ಸೊಗಸು ಅರಿವಾದೀತು. ಮೊದಲನೆಯ ಭಾಗ ವಿಪ್ರಲಂಭಶೃಂಗಾರವನ್ನೂ ಕೊನೆಯ ಭಾಗ ಸಂಭೋಗ ಶೃಂಗಾರವನ್ನೂ ಹೇಳುತ್ತವೆ.

'ಮೇಘೈರ್ಮೇದುರಮಂಬರಂ ವನಭುವಃ
ಶ್ಯಾಮಾಸ್ತಮಾಲ ದ್ರುಮೈಃ ।
ನಕ್ತಂ ಭೀರುರಯಂ ತ್ವಮೇವ ತದಿಮಂ
ರಾಧೇ ಗೃಹಂ ಪ್ರಾಪಯ ॥
ಇತ್ಥಂ ನಂದನಿದೇಶತಶ್ಚಲಿತಯೋಃ
ಪ್ರತ್ಯಧ್ವ ಕುಂಜದ್ರುಮಂ।
ರಾಧಾಮಾಧವಯೋರ್ಜಯಂತಿ ಯಮುನಾ
ಕೂಲೇ ರಹಃ ಕೇಲಯಃ॥

ರಾಧೆ ಧೈರ್ಯವಂತೆ; ಕೃಷ್ಣನಾದರೆ ಭೀರುವಂತೆ. ಇದು ನಂದನ ಎಣಿಕೆ. ರಾತ್ರಿಯಾದರೆ ಕೃಷ್ಣನಿಗೆ ಅಂಜಿಕೆಯೆ? ಮಗ್ಗುಲಲ್ಲಿ ರಾಧೆಯಿದ್ದಾಗ ಧೈರ್ಯವೆ? ರಾಧಾಮಾಧವರು ಕೂಡಬೇಕು; ಇದಕ್ಕೊಂದು ಕವಿಸಮಯ ಇದು. ವಿಪ್ರಲಂಭವು ಶೃಂಗಾರಕ್ಕೆ ಎತ್ತಿದ ಪ್ರಕಾರ; ಆದರೆ ಸಂಭೋಗ

ಅದರ ಗುರಿಯೂ ಹೌದು, ಕೃತಾರ್ಥತೆಯೂ ಹೌದು. ಎರಡೂ ಪ್ರಕಾರಗಳನ್ನು ಒಟ್ಟಿಗೆ ಕೂಡಿಸಿಕೊಂಡಿರುವ ಈ ಮಂಗಳಶ್ಲೋಕವು ರಮಣೀಯವಾಗಿದೆ; ಹೃದಯಂಗಮವಾಗಿದೆ. ಮಾತುಗಳಲ್ಲಿ ಮಾಧುರ್ಯವಿದೆ, ಏನೊಂದು ತೊಡಕೂ ಇರದೆ ಕೋಮಲವಾಗಿದೆ; ರಸಯುಕ್ತವಾಗಿ ಬೆಳಗುತ್ತ ಕಾಂತವಾಗಿಯೂ ಇದೆ; 'ಮಧುರ ಕೋಮಲ ಕಾಂತಪದಾವಳಿ'ಯೇ ಜಯದೇವನ ಸರಸ್ವತಿಯ ಸ್ವಾರಸ್ಯವೆಂಬುದನ್ನು ಮಂಗಳಾಚರಣೆಯಲ್ಲೇ ಕಂಡುಕೊಳ್ಳುತ್ತೇವೆ.

ರಾಧಾಕೃಷ್ಣರು ಒಡಗೂಡಿದರೆ ಅದೇ ರಾಸಲೀಲೆ. ಶೃಂಗಾರ ಪ್ರಧಾನವಾದ ಈ ಕ್ರೀಡೆಯಲ್ಲಿ ಕೃಷ್ಣನು ಮದನ, ರಾಧೆಯ ರತಿ. ಶೃಂಗಾರರಸವೇ ಮೈವೆತ್ತಿ ಬಂದವನು ಕೃಷ್ಣ (1, 10) -

> 'ಶೃಂಗಾರಃ ಸಖಿ ಮೂರ್ತಿ ಮಾನಿವ
> ಮಧೌ ಮುಗ್ಧೋ ಹರಿಃ ಕ್ರೀಡತಿ।'

ರಾಸರೂಪಿಣಿಯಾದ ರಾಧೆಯು ಆತ್ಮ; ಕೃಷ್ಣನು ಆತ್ಮಾರಾಮ. ಪರಮಾತ್ಮನಾದ ಕೃಷ್ಣನ ಕ್ರೀಡೆಗೆ ಅನುವಾದವಳೇ ರಾಧೆ ('ರಾಸಕ್ರೀಡಾಧಿ ದೇವೀ ಶ್ರೀಕೃಷ್ಣಸ್ಯ ಪರಮಾತ್ಮನಃ') ರಾಧಾಕೃಷ್ಣರು ವಿಹರಿಸುವ ಭೂಮಿಯನ್ನೇ 'ವ್ರಜ'ವೆಂದು ಕರೆದಿದ್ದಾರೆ. ನಂದನ ಮಗನಾಗಿ ಆನಂದ ತೋರಿಕೊಳ್ಳುವುದು ಇಲ್ಲಿಯೇ

> 'ಆತ್ಮಾ ತು ರಾಧಿಕಾ ತಸ್ಯ
> ತಯೈವ ರಮಣಾದಸೌ।
> ಆತ್ಮಾರಾಮತಯಾ ಪ್ರಾಜ್ಞೈಃ
> ಪ್ರೋಚ್ಯತೇ ಗೂಢವೇದಿಭಿಃ॥'

(ಸ್ಕಾಂದಪುರಾಣ 1, 16)

ತಾತ್ಪರ್ಯ

ಕೃಷ್ಣನ ಕ್ರೀಡೆಗೆ ಅನುವಾದವಳು ರಾಧೆಯೆಂಬ ಕಲ್ಪನೆಯಲ್ಲಿ ಒಂದು

ವಿಶೇಷವುಂಟು. ವಿಷ್ಣುವಿನ ಅಧಿಕ್ಯವನ್ನು ಹೇಳುವ ವಿಷ್ಣು ಪುರಾಣ, ಬ್ರಹ್ಮಪುರಾಣ, ಭಾಗವತ, ಹರಿವಂಶ ಮತ್ತು ಮಹಾಭಾರತಗಳಲ್ಲಿ ರಾಧೆಯ ಪ್ರಸ್ತಾಪ ಇಲ್ಲವೇ ಇಲ್ಲ; ರಾಧೆಯ ಉಲ್ಲೇಖವೂ ಇಲ್ಲ. ಕೃಷ್ಣನನ್ನು ಕುರಿತಾದ ಕೃಷ್ಣೋಪನಿಷತ್ತು, ಗೋಪಾಲಪೂರ್ವತಾಪಿನೀ ಉಪನಿಷತ್ತು, ಉತ್ತರತಾಪಿನೀ ಉಪನಿಷತ್ತುಗಳಲ್ಲಿಯೂ ರಾಧೆ ಕಾಣಸಿಗುವುದಿಲ್ಲ. ಈ ಹಳೆಯ ಗ್ರಂಥಗಳಲ್ಲಿ ಬರುವ ಕೃಷ್ಣನ ಗೆಳತಿಯಾದ ಗೋಪಿಯನ್ನು ಬ್ರಹ್ಮವೈವರ್ತಪುರಾಣದಲ್ಲಿ ಮೊದಲ ಬಾರಿಗೆ ರಾಧೆಯೆಂದು ವ್ಯವಹರಿಸಿದ್ದಾರೆ. ರಾಧೆಯ ಕಲ್ಪನೆಯು ರಹಸ್ಯವಾದುದೆಂಬ ಮಾತು ಪದ್ಮಪುರಾಣದಲ್ಲಿ ಬರುತ್ತದೆ. ಜಗತ್ತಿಗೆ ಆಧಾರರೂಪಳಾಗಿ, ಪರಮಾನಂದರೂಪಿಣಿಯಾಗಿ, ಕೃಷ್ಣನೆಂಬ ಪರಮಾತ್ಮನ ಶಕ್ತಿ ಸ್ವರೂಪಳು ರಾಧೆಯೆಂಬ ವ್ಯಾಖ್ಯಾನ ಬ್ರಹ್ಮವೈವರ್ತದಲ್ಲಿ ಮೊದಲಾಗುತ್ತದೆ. ರಾಧಾಕೃಷ್ಣ ಕಲ್ಪನೆಯೇ ಪ್ರಮುಖವಗಿ ಬರುವ ಈ ಪುರಾಣಕ್ಕೆ ಉಪಪುರಾಣಗಳಲ್ಲೊಂದಾದ ದೇವೀಭಾಗವತದ ಒಂಬತ್ತನೆಯ ಸ್ಕಂದವೇ ಪ್ರೇರಣೆಯಾಗಿರುವಂತೆ ತೋರುತ್ತದೆ.

ರಾಧೆಯು ರಾಸ ಕ್ರೀಡಾಧಿ ದೇವಿಯಾದ ಸ್ತ್ರೀ ಮಾತ್ರವಲ್ಲ, ವಿಶ್ವದ ಉಪಾದಾನ ಕಾರಣ; ಪರಮಾತ್ಮನು ಅಕ್ಕಸಾಲೆಯಂತೆ ಎಂದರೆ ರಾಧೆಯು ಚಿನ್ನದಂತೆ. ಚಿನ್ನವಿಲ್ಲದೆ ಅಕ್ಕಸಾಲೆ ಓಲೆ ಮಾಡುವುದು ಹೇಗೆ? ಸೃಷ್ಟಿಗೂ, ಅದರ ಸಂರಕ್ಷಣೆಗೂ ರಾಧೆಯು ಅಗತ್ಯ. ಕೃಷ್ಣನು ಪುರುಷನಾದರೆ ರಾಧೆಯು ಪ್ರಕೃತಿ. ಅವರಿಬ್ಬರ ವಿಶೇಷ ಸಂಯೋಗದಿಂದ ಇಡೀ ಪ್ರಪಂಚ.

ಈ ತಾತ್ವಿಕವಾದ ಅಂತರಾರ್ಥವೇ ಗೀತಗೋವಿಂದದ ಜೀವನಾಡಿ. ಮೇಲೆ ಶೃಂಗಾರಪ್ರಧಾನವಾದ ಕಾವ್ಯವೆಂದು ಕಂಡರೂ, ಅನುಚಿಂತನೆ ಮಾಡಿದಲ್ಲಿ ವೇದಾಂತದ ಪ್ರಕರಣ ಗ್ರಂಥವಾಗಬಲ್ಲದು. ಜೀವಾತ್ಮ

ಪರಮಾತ್ಮರ ದ್ವೈತಭಾವದಿಂದ ಸಾಂಸಾರಿಕ ದುಃಖ; ವಿವೇಕದಿಂದ ಅವರ ಸಂಯೋಗವಾದರೆ ಅದು ಸುಖ.

'ವಾಸುದೇವರತಿಕೇಳಿ' ಎಂದರೆ ಕೃಷ್ಣನ ಕ್ರೀಡೆಯು ಶುದ್ಧ ಶೃಂಗಾರ; ಅದು ಕೇವಲ ಮನುಷ್ಯರ ಶೃಂಗಾರದಂತಲ್ಲ. ಇಲ್ಲಿನ ಕೃಷ್ಣನು ಅಮಾನುಷರೂಪದ ಪರಮಾತ್ಮನೇ. ಪರಮಾತ್ಮನು ಮನುಷ್ಯರ ನಡುವೆ ತೋರಿಕೊಂಡಾಗ ಮನುಷ್ಯರಂತೆಯೇ ವ್ಯವಹರಿಸುತ್ತಾನೆ (ಮನುಷ್ಯವತ್ ಪ್ರವರ್ತಂತೇ) ಎನ್ನುವ ವಿವರಣೆಯೂ ಇದೆ. ಇದಕ್ಕಿಂತ ಹೆಚ್ಚಾಗಿ ಜೀವಾತ್ಮ ಪರಮಾತ್ಮರ ಸಮಾಗಮವೇ ಇಲ್ಲಿ ಮುಖ್ಯ ಸಂಕೇತ. ಭಕ್ತ ಭಾಗವತರೊಂದಿಗೆ ಭಗವಂತನ ಕ್ರೀಡೆಯ ಕಥನ ಇದು. ರಾಧೆಯೆಂದರೆ ಸೌಂದರ್ಯದ ಪರಮಾವಧಿ. ಕೃಷ್ಣನೆಂದರೆ ದಿವ್ಯವಾದ ಪರಿಪೂರ್ಣತೆ; ಇವೆರಡನ್ನು ಒಂದುಗೂಡಿಸುವ ಆಧ್ಯಾತ್ಮ ಪ್ರವೃತ್ತಿಯೇ ರಾಧೆಯ ಗೆಳತಿ. ದಶಾಕೃತಿಗಳನ್ನು ಹೇಳುವಾಗ ಪರಮಾತ್ಮನ ಒಂದು ಅವತಾರ ಕೃಷ್ಣನಲ್ಲ; ಕೃಷ್ಣನೇ ಪರಮಾತ್ಮ, ಅವನದ್ದೇ ಇತರ ದಶಾಕೃತಿಗಳು. 'ದಶಾಕೃತಿಕೃತೇ ಕೃಷ್ಣಾಯ ತುಭ್ಯಂ ನಮಃ' ಎನ್ನುವುದು ಇಲ್ಲಿನ ಒಕ್ಕಣೆಯೆಂಬುದನ್ನು ಗಮನಿಸಬೇಕು.

ವಿಷ್ಣುವಿನ ದಶಾವತಾರಗಳನ್ನು ವಿವರಿಸುವ ಆಕರಗ್ರಂಥಗಳು ವಿಷ್ಣುಪುರಾಣ (ಐದನೆಯ ಅಂಶ), ಬ್ರಹ್ಮಪುರಾಣ (ಅಧ್ಯಾಯಗಳು 180-212), ಮಹಾಭಾರತ, ಹರಿವಂಶ, ಮತ್ತು ಭಾಗವತಪುರಾಣ, ಇಲ್ಲೆಲ್ಲಿಯೂ ರಾಧೆಯ ಸೊಲ್ಲು ಇರದು. ಭಾಗವತದಲ್ಲಿ (10, 30, 28) ಬರುವ 'ಅನನ್ಯಾ ರಾಧಿತೋ ನೂನಂ ಭಗವಾನ್ ಹರಿರೀಶ್ವರಃ' ಎಂಬ ಮಾತಿನಲ್ಲಿ 'ರಾಧಿತೋ' ಎಂದು ಬರುವುದೇ ರಾಧೆಯ ಉಲ್ಲೇಖವೆಂದು ಕೆಲವರ ಎಣಿಕೆ. ಆದರೆ 'ಅನನ್ಯಾರಾಧಿತಃ' ಎಂಬುದು ಒಂದು ಪದ; ಅನನ್ಯ

ಮತ್ತು ಆರಾಧಿತ ಎಂಬೆರಡು ಪದಗಳು ಕೂಡಿಕೊಂಡಿವೆ. ರಾಧೆಯ ಸೂಚನೆಯೇನು ಇರದು. ಭಾಗವತದಲ್ಲಿ ಕೃಷ್ಣನ ರಾಸಕ್ರೀಡೆಯನ್ನು ಬಣ್ಣಿಸುವ ರಾಸಪಂಚಾಧ್ಯಾಯಿಯೆಂಬ ಭಾಗವೇ ಇದೆ; ಇಲ್ಲಿಯೂ ರಾಧೆಯ ಪ್ರಸ್ತಾಪ ಕಾಣಸಿಗುವುದಿಲ್ಲ. ಬ್ರಹ್ಮ ವೈವರ್ತ ಪುರಾಣದ ಪ್ರಕಾರ ರಾಧೆಯೇ 'ರಾಸೇಶ್ವರಿ'; ಗರ್ಗಸಂಹಿತೆಯೂ ಇದನ್ನೇ ಹೇಳುತ್ತದೆ. ರಾಧೆಯನ್ನು ಬಿಟ್ಟು ರಾಸಕ್ರೀಡೆಯೆಲ್ಲಿಯದು? ಆದರೂ ಭಾಗವತವು ರಾಧೆಯನ್ನು ಕೈಬಿಟ್ಟಿದೆ!

ಮುಂದೆ ಇತರ ಕೆಲವು ಪುರಾಣಗಳಲ್ಲಿ ರಾಧೆ ಪ್ರಧಾನವಾಗಿಯೆ ಕಾಣಿಸಿಕೊಳ್ಳುತ್ತಾಳೆ. ದೇವೀ ಭಾಗವತದ ಪ್ರಕಾರ ಮಾಯಾ ಶಬಲ ಬ್ರಹ್ಮನ ಪ್ರಕೃತಿರೂಪದ ಪಂಚಶಕ್ತಿಗಳಲ್ಲೊಂದು ರಾಧೆಯೆನಿಸಿಕೊಳ್ಳುತ್ತದೆ (6,1,1)-

'ಗಣೇಶ ಜನನೀ ದುರ್ಗಾ ರಾಧಾ ಲಕ್ಷ್ಮೀಃ ಸರಸ್ವತೀ।
ಸಾವಿತ್ರೀ ಚ ಸೃಷ್ಟಿವಿಧೌ ಪ್ರಕೃತಿಃ ಪಂಚಧಾ ಸ್ಮೃತಾ॥'

ಇಲ್ಲಿ ರಾಧೆಯು ಪಂಚಪ್ರಾಣಾಧಿದೇವಿ, ಪರಮಾನಂದರೂಪಿಣಿ (6,1,44,45); ರಾಸಕ್ರೀಡಾಧಿದೇವಿ, ಕೃಷ್ಣಪರಮಾತ್ಮನ ರಾಸಮಂಡಲದಿಂದಲೇ ಹೊರಹೊಮ್ಮಿದವಳು. ರಾಸಮಂಡಲಮಂಡಿತೆ, ರಾಸೇಶ್ವರಿ, ಸುರಸಿಕೆ (ಅಲ್ಲಿಯೇ 46-47). ಬ್ರಹ್ಮವೈವರ್ತ ಪುರಾಣದಲ್ಲೂ (ಬ್ರಹ್ಮಖಂಡ, ಅಧ್ಯಾಯ 5) ಕೃಷ್ಣನ ರಾಸಮಂಡಲದಲ್ಲಿ ತೋರಿಕೊಳ್ಳುವವಳು ರಾಧೆ. ಕೃಷ್ಣನಲ್ಲಿ ಭಕ್ತಿಯು ಒದಗಿಬರಲು ರಾಧೆಯೇ ಕಾರಣವೆಂಬ ಮಾತೂ ಅಲ್ಲಿ ಬಂದಿದೆ.

'ಶ್ರೀ ಕೃಷ್ಣಭಕ್ತಿ ದಾಸ್ಯೈಕ ಕರಾ ಚ ಸರ್ವಸಂಪದಾಂ।'

ವರಾಹ ಕಲ್ಪದಲ್ಲಿ ವೃಷಭಾನುವೆಂಬುವನ ಮಗಳಾಗಿ ಅವತರಿಸಿದವಳಂತೆ. ರಾಧೆ -

'ಅವತಾರೇ ಚ ವಾರಾಹೇ ವೃಷಭಾನುಸುತಾ ಚ ಯಾ'

ಹೆಣ್ಣು ಸ್ವಭಾವದ ರತ್ನರೂಪಿ; ಕೃಷ್ಣನ ಒಡಲೊಳಗೇ ಅಡಗಿರುವವಳು

'ಸ್ತ್ರೀರತ್ನ ಸಾರಸಂಭೂತಾ ಕೃಷ್ಣವಕ್ಷಃಸ್ಥಳೇ ಸ್ಥಿತಾ।

ಮುಗಿಲಲ್ಲಿ ಮೋಡದೊಳಗಿಂದ ಹೊಳೆಯುತ್ತ ಬಳುಕುತ್ತ ಹೊರಬರುವ ಮಿಂಚು ರಾಧೆ -

'ಯಥಾಂಬರೇ ನವಘನೇ ಲೋಲಾ ಸೌದಾಮಿನೀ ಯಥಾ'

ಅವಳು 'ಕೋಟಿಸೂರ್ಯ ಸಮಾ ಜುಷ್ಟಪುಷ್ಪ ಜಾಜ್ವಲ್ಯ ವಿಗ್ರಹಾ' ಇಡೀ ಜಗತ್ತಿಗೆ ಅವಳೇ ಆಸರೆ ('ಆಧಾರರೂಪಾ ಸರ್ವೇಷಾಂ'), ಅವಳೇ ಎಲ್ಲಕ್ಕೂ ಉಪಾದಾನಕಾರಣ. ಅವಳಿಲ್ಲದೆ ಬ್ರಹ್ಮನು ಸೃಷ್ಟಿಮಾಡುವುದೇ ಸಾಧ್ಯವಿರದು. ಅವಳೇ ವೇದದಲ್ಲಿ ಹೇಳಿರುವ ಶತರೂಪ. ಮಣ್ಣಿಲ್ಲದೆ ಕುಂಬಾರನು ಮಡಕೆಯನ್ನು ಮಾಡಲಾರ; ಬ್ರಹ್ಮ ಕುಂಬಾರನಾದರೆ ರಾಧೆ ಮಣ್ಣು.

'ವಿನಾ ಮೃದಾ ಘಟಂ ಕರ್ತುಂ ಕುಲಾಲೋಽಪಿ ನ ಹೀಶ್ವರಃ'

ಮಡಕೆಗೆ ಮಣ್ಣು ಉಪಾದಾನಕಾರಣ; ಜಗತ್ ಸೃಷ್ಟಿಯಲ್ಲಿ ರಾಧೆಯ ಪಾತ್ರ ಇದೇ. ಪ್ರಕೃತಿ (ಸ್ತ್ರೀತತ್ತ್ವ) ರಾಧೆ; ಪುರುಷ (ಪುಂತತ್ತ್ವ) ಬ್ರಹ್ಮ ರೋಹಿಣೀ, ಶಚಿ, ತಾರೆ, ಅರುಂಧತೀ, ಅಹಲ್ಯೆ, ದೇವಹೂತಿ, ಮೇನಕೆ, ಗಾಂಧಾರಿ, ಸುಭದ್ರೆ, ರುಕ್ಮಿಣಿ, ದ್ರೌಪದಿ, ಕೌಶಲ್ಯೆ, ರೇವತಿ ಇವರೆಲ್ಲ ರಾಧೆಯ ರೂಪಗಳೇ.

ರಾಧೆ ಆತ್ಮವಾದರೆ ಕೃಷ್ಣನೆಂದರೆ ಪರಮಾತ್ಮ -

'ಸ ಚ ಆತ್ಮಾ ಪರಂಬ್ರಹ್ಮ ಕೃಷ್ಣ ಇತ್ಯಭಿದೀಯತೇ'

ಸ್ಕಾಂದಮಹಾಪುರಾಣದ ಒಕ್ಕಣೆಯಿದು (2, 11) -

'ಆತ್ಮಾರಾಮಸ್ಯ ಕೃಷ್ಣಸ್ಯ ಧ್ರುವಮಾತ್ಮಾಸ್ತಿ ರಾಧಿಕಾ'

ಆತ್ಮಾರಾಮನಾದವನು ಕೃಷ್ಣ; ಆತ್ಮನಲ್ಲೇ ಕ್ರೀಡಿಸುವವನು, ಆತ್ಮನೊಳಗೇ ನೆಮ್ಮದಿಯಿಂದ ಇರುವವನು. ಎಲ್ಲರ ಒಡಲಲ್ಲಿರುವ ಬೆಳಕು ಆತ್ಮ ಆ ಬೆಳಕಿನೊಳಗಣ ಉಸಿರು ಕೃಷ್ಣ. ಕೃಷ್ಣನ ಆತ್ಮವೇ ರಾಧೆ.

ರಾಧಾಕೃಷ್ಣರ ಸಂಯೋಗ ಸಂಭೋಗಗಳನ್ನು ಕುರಿತಂತೆ ಸ್ಕಾಂದಪುರಾಣವಲ್ಲದೆ ನಾರದಪಾಂಚರಾತ್ರ, ದೇವೀಭಾಗವತ, ಗರ್ಗಸಂಹಿತೆಗಳಲ್ಲೂ ವಿವರಗಳಿವೆ; ಬ್ರಹ್ಮವೈವರ್ತಪುರಾಣವಂತೂ ಸರಿಯೇ ಸರಿ. ಸ್ಕಾಂದಪುರಾಣದ ವೈಷ್ಣವ ಖಂಡದಲ್ಲಿ (ವ್ರಜಭೂಮಿ ಮಹಾತ್ಮ್ಯೆ) ಕೃಷ್ಣನೇ ರಾಧೆ, ರಾಧೆಯೇ ಕೃಷ್ಣನೆಂದೂ, ಕೃಷ್ಣನ ಕೈಯಲ್ಲಿರುವ ಕೊಳಲು ಅವರ ಪ್ರೇಮದ ಸಂಕೇತವೆಂದೂ ವಿವರಣೆಯಿದೆ -

'ಸ ಏವ ಸಾ ಸ ಸೈವಾಸ್ತಿ ವಂಶೀತತ್ ಪ್ರೇಮರೂಪಿಕಾ'

ಕೃಷ್ಣನ ಮನಸ್ಸು ಚಂದ್ರನೆಂದರೆ, ರಾಧೆಯ ಬೆಳದಿಂಗಳು

'ಶ್ರೀ ಕೃಷ್ಣಸ್ಯ ಮನಶ್ಚಂದ್ರೋ ರಾಧಾಸ್ಯ ಪ್ರಭಯಾನ್ವಿತಃ'

(ಅಲ್ಲಿಯೇ 3, 5)

ದೇವೀಭಾಗವತದಲ್ಲಿ ರಾಧೋಪಾಸನೆಯ ವಿವರವೂ ಇದೆ. ಶಿವನೇ ವ್ಯಾಸನಿಗೆ ಇದನ್ನು ಹೇಳಿದುದನ್ನು ಶಿವನು ಪಾರ್ವತಿಗೆ ತಿಳಿಸುತ್ತಾನೆ. ದೇವೀಭಾಗವತ ಪುರಾಣದ ಮುಖ್ಯಾರ್ಥವು ಇದೆಂಬ ಒಕ್ಕಣೆಯಿದೆ

'ಇದಂ ರಹಸ್ಯಂ ಚರಿತಂ ರಾಧೋಪಾಸನಮುತ್ತಮಂ।
ವ್ಯಾಸಾಯ ಮಮಭಕ್ತಾಯ ಪ್ರೋಕ್ತಂ ಪೂರ್ವಂ ಮಯಾದ್ರಿಜೇ॥'

ವಿವರ

ಈ ಸಿದ್ಧಾಂತವನ್ನು ಹೇಳಲು ರಾಧಾ ಕೃಷ್ಣರ ವಿರಹ, ಪ್ರೇಮದಿಂದ ಅವರ ಪುನರ್ಮಿಲನವಾದ ಪ್ರಸಂಗವನ್ನು ಕವಿ ಉಪಯೋಗಿಸಿಕೊಂಡಿದ್ದಾನೆ. ಆದರೆ ಈ ಮಾರ್ಮಿಕವಾದ, ಆಧ್ಯಾತ್ಮಿಕವೆಂಬಂಥ ಅರ್ಥದಿಂದ ಕಾವ್ಯ ಗುಣಕ್ಕೆ ಎಷ್ಟು ಮಾತ್ರಕ್ಕೂ ಕುಂದು ಬಂದಿಲ್ಲ. ಭಕ್ತರಂತೆ ರಸಿಕರೂ ಆನಂದ ಪಡುವಂಥ ಗ್ರಂಥ ಇದು.

ಮೊದಲ ಸರ್ಗದ ಮೊದಲಲ್ಲಿ ದಶವತಾರಗಳನ್ನು ಮಾಡಿದ ಕೃಷ್ಣನಿಗೆ ನಮಸ್ಕ್ರಿಯೆ ಇದೆ; 'ಜಯ ಜಗದೀಶ ಹರೇ' ಎಂಬ ಪಲ್ಲವಿಯಿರುವ ದಶಾವತಾರ ವರ್ಣನೆಯಿದೆ. ವಿರಹಿ ಜನರಿಗೆ ದುರಂತವಾದ ವಸಂತಮಾಸದಲ್ಲಿ ರಾಧಾ-ಕೃಷ್ಣರ ವಿರಹವೇ ಆರಂಭ ಪ್ರಸಂಗ. ಮುನಿಗಳ ಮನಸ್ಸನ್ನೂ ಮೋಹನ ಮಾಡುವ ಈ ಮಾಸದಲ್ಲಿ, ಶೃಂಗಾರದಿಂದ ಉದ್ದೀಪ್ತವಾದ ಬೃಂದಾವನದ ಪ್ರಕೃತಿಯ ರಮಣೀಯತೆಯಲ್ಲಿ ಕೃಷ್ಣನು ತನ್ನಲ್ಲಿ ತನ್ಮಯರಾದ ಯುವತಿಯರೊಂದಿಗೆ ಆನಂದದಿಂದ ಆಡುತ್ತಿದ್ದಾನೆ.

ಅತ್ತ ಪ್ರಣಯದಿಂದ ಉತ್ತೇಜಿತಳಾದ ರಾಧೆಯು ವಿರಹದ ವ್ಯಥೆಯಲ್ಲಿ ಕೃಷ್ಣನಿಗೆ ಆಹ್ವಾನದ ಸಂದೇಶ ಕಳುಹಿಸುವ ಸನ್ನಾಹದಲ್ಲಿದ್ದಾಳೆ. 'ಅನೇಕ ನಾರೀಪರಿರಂಭ ಸಂಭ್ರಮ'ದಲ್ಲಿದ್ದ ಕೃಷ್ಣನಿಗೆ ಸಖಿಯು ಈ ಸಂದೇಶವನ್ನೊಯ್ಯುತ್ತಾಳೆ. ಪ್ರಕೃತಿಯ ವೈಭವದಲ್ಲಿ ಮೈಮರೆತ ದಾಮೋದರನ ಆಮೋದವೇ ಪ್ರಥಮ ಸರ್ಗದ ವಸ್ತು.

'ಕಿಂಚ ಸ್ನಿಗ್ಧ ರಸಾಲಮೌಲಿ ಮುಕುಲಾನ್ಯಾಲೋಕ್ಯ ಹರ್ಷೋದಯಾತ್ ಉನ್ಮೀಲಂತಿ ಕುಹೂಃ ಕುಹೂರಿತಿ ಕಲೋತ್ತಾಲಾಃ ಪಿಕಾನಾಂ ಗಿರಃ'

ಮುಂದಿನ ಸರ್ಗದಲ್ಲಿ ರಾಧೆಯ ವಿರಹವ್ಯಥೆ ಹೆಚ್ಚುತ್ತದೆ. ಕೃಷ್ಣನಲ್ಲಿಯ ಪ್ರೇಮ ಮತ್ತು ಅವನ ಗೆಳತಿಯರಲ್ಲಿ ಈರ್ಷ್ಯೆ ಇವುಗಳ ಸ್ವಚ್ಛಂದ ಸಮರದಲ್ಲಿ ರಾಧೆಯು ಸೊರಗುತ್ತಾಳೆ. ಕ್ರೋಧದಲ್ಲಿ ಕೃಷ್ಣನನ್ನು ಮರೆಯುವ ತವಕ ಇದ್ದರೂ ಸಹಜವಾದ, ಸಮುತ್ತೇಜಿತವಾದ, ದೃಢವಾದ ಪ್ರೇಮದಿಂದ ಅದು ಸಾಧ್ಯವಾಗದು. ರಾಧೆಯು ಕೃಷ್ಣನ ಮೋಹಕ ಶಕ್ತಿಯನ್ನು ನೆನೆದು ನೆನೆದು ಪರಿತಪಿಸುತ್ತಾಳೆ; ಇಷ್ಟಕ್ಕೂ ಕಾರಣನಾದ ಮನ್ಮಥನನ್ನು ಮನಸಾರೆ ನಿಂದಿಸುತ್ತಾಳೆ.

ಇತ್ತ ಕೃಷ್ಣನಿಗೂ ರಾಧೆಯ ಕಾತರ ಆರಂಭವಾಗಿದೆ. ಗೆಳತಿಯರಿಂದ ತಪ್ಪಿಸಿಕೊಂಡು ದೂರದ ಕುಂಜದಲ್ಲಿ ಒಂಟಿಯಾಗಿ ರಾಧೆಯ ಅನ್ವೇಷಣೆಯಲ್ಲಿ ತೊಡಗಿದ್ದಾನೆ. ರಾಧೆಯು ತನ್ನಲ್ಲಿ ಏನು ಕೋಪಗೊಂಡಿದ್ದಾಳೋ? ಎಲ್ಲಿ ಹೋದಳೋ? ಉದ್ವೇಗದಲ್ಲಿ ಏನಾದಳೋ? ಎಂದು ಕೃಷ್ಣನ ಆತಂಕ, ಅವಳ ಆಲಿಂಗನಕ್ಕೆ ಅವನ ಆತುರ. ಹೀಗೆ ಕೃಷ್ಣನು ರಾಧಾನುರಾಗದಿಂದ ಕುದಿಯುತ್ತಿದ್ದಾಗ ರಾಧೆಯ ಸಖಿಯು ಸಂದೇಶವನ್ನು ತರುತ್ತಾಳೆ.

> 'ಮಾಧವ, ಮನಸಿಜವಿಶಿಖಭಯಾದಿವ
> ಭಾವನಯಾ ತ್ವಯಿ ಲೀನಾ,
> ಸಾ ವಿರಹೇ ತವದೀನಾ.'

ರಾಧೆಯ ವಿರಹವರ್ಣನೆಯಿಂದ ಸಾಂತ್ವನಗೊಂಡ ಕೃಷ್ಣನು ರಾಧೆಯನ್ನು ಅಲ್ಲಿಗೇ ಕರೆತರಲು ಸಖಿಯನ್ನು ಕಳುಹಿಸುತ್ತಾನೆ. ಸಖಿಯು ಹೋಗಿ ರಾಧೆಯ ಮುಂದೆ ಕೃಷ್ಣನ ವಿರಹವ್ಯಥೆಯನ್ನು ವಿವರಿಸಿದರೂ, ವಿರಹದಿಂದ ಬಳಲಿದ್ದ ರಾಧೆಯು ಅಲ್ಲಿಂದ ಏಳಲೂ ಅಶಕ್ತಳಾಗಿದ್ದಳು. ಕೃಷ್ಣನಲ್ಲೇ ಅನುರಕ್ತಳಾದರೂ, ಕೃಷ್ಣನ ಬಳಿ ಹೋಗುವಷ್ಟು ಸಾಮರ್ಥ್ಯವಿರಲಿಲ್ಲ; ವಿಪ್ರಲಂಭ ಅಷ್ಟು ಕಠೋರವಾಗಿತ್ತು. ತನ್ನ

ಲತಾಗೃಹದಲ್ಲೇ ಕೃಷ್ಣನು ತನ್ನನ್ನು ಸಂಧಿಸಲೆಂಬ ಬಯಕೆ ರಾಧೆಗಿತ್ತೆಂದು ವ್ಯಾಖ್ಯಾನಕಾರರ ಸೂಚನೆ. ಅಂತೂ ವಿಷಣ್ಣಳಾಗಿ ಸಖಿ, ಕೃಷ್ಣನ ಬಳಿಗೇ ಮತ್ತೆ ಹೋಗಿ ರಾಧೆಯ ದೀನಸ್ಥಿತಿಯನ್ನು ಬಣ್ಣಿಸಿದಳು :

'ನಾಥ ಹರೇ, ಸೀದತಿ ರಾಧಾ ವಾಸಗೃಹೇ.'

ವಿರಹ - ವಿರಸ

ಕೃಷ್ಣನ ಪ್ರತೀಕ್ಷೆಯಲ್ಲಿದ್ದ ರಾಧೆಯ ವ್ಯಥೆಯು ಆಶಯದಿಂದ ಸ್ವಲ್ಪ ಶಮನವಾದರೂ ಕೃಷ್ಣನು ಬರದೇ ಇದ್ದಾಗ ದಾವಾನಲದಂತೆ ಹಬ್ಬಿತು. ದಿನವೆಲ್ಲ ಕಾದರೂ ಕೃಷ್ಣನು ಬರಲೊಲ್ಲ; ಪ್ರತೀಕ್ಷೆಯಲ್ಲೇ ಚಂದ್ರೋದಯವೂ ಆಯಿತು. ಬೃಂದವನವನ್ನೆಲ್ಲ ಬೆಳಗುವ ಆ ಪ್ರಭೆಯನ್ನು ಕವಿ 'ದಿಕ್ ಸುಂದರೀವದನ ಚಂದನ ಬಿಂದುರಿಂದು:' ಎಂದು ವರ್ಣಿಸಿದ್ದಾನೆ.

ಮೊದಲೇ ಮಧುಮಾಸ; ಅದರ ಮೇಲೆ ಪ್ರಣಯದ ರಭಸ; ಪ್ರಿಯನ ಪ್ರತೀಕ್ಷೆ, ಕಾತರ; ಅಷ್ಟರದಲ್ಲಿ ಈ ಚಂದ್ರೋದಯ! ವಿರಹದ ವೇದನೆ ವಿಪುಲವಾಗಿ ಹಬ್ಬಲು ಇನ್ನೇನು ಬೇಕು? ರಾಧೆಗೆ ತನ್ನ ಸೌಂದರ್ಯವೇ ವಿಫಲವೆನಿಸಿತು, ಯೌವನವು ನಿರರ್ಥಕವೆನಿಸಿತು.

ಕಾಮನು ಇವಳನ್ನು ಹೀಗೆ ಹಿಂಡುತ್ತಿರುವಲ್ಲಿ ಇನ್ನಾವಳೋ ಕಾಮಿನಿಯು ಕೃಷ್ಣನ ಗಾಢಾಲಿಂಗನದಲ್ಲಿ ಇರಬಹುದೆಂಬ ಸಂಶಯವು ಅವಳನ್ನು ಹುಚ್ಚು ಹಿಡಿಸಿತು. ತಾನು ಹಂಬಲಿಸಿ ಹುಡುಕಿಕೊಂಡ ಹೃದಯೇಶ್ವರನು ಹೀಗೆ ತನ್ನನ್ನು ನಿರ್ಲಕ್ಷ್ಯ ಮಾಡಿದಮೇಲೆ ಜೀವಿತಕ್ಕಿಂತ ಮರಣವೇ ಲೇಸೆಂಬ ಯೋಚನೆ ಅವಳ ಅಂತರಂಗದಲ್ಲಿ ಹಾದು ಹೋಯಿತು.

ಹೀಗೆ ಬಳಲುತ್ತಿದ್ದಾಗ ರಾಧೆಯು ದೂರದಲ್ಲಿ ಕೃಷ್ಣನಿಲ್ಲದೆ ಸಖಿಯು ಒಬ್ಬಳೇ ಬರುವುದನ್ನು ಕಂಡಳು. ಅವಳ ಹೃದಯವೇ ಜಗ್ಗೆಂದಿತು. ಸಖಿಯೂ ಅಧೋಮುಖಿಯಾಗಿ ಖಿನ್ನಳಂತೆ ಕಾಣುತ್ತಿದ್ದಾಳೆ. ಕಾರಣ ಏನಿದ್ದೀತು? 'ರತಿರಣಧೀರ'ನಾದ ವನಮಾಲಿಯು ನಿಜವಾಗಿ ಅನ್ಯಮನಸ್ಕನಾದನೆ? ಅವನ ಪರಿರಂಭಣವನ್ನು ಚುಂಬನವನ್ನೂ ಪಡೆದ ಭಾಗ್ಯಶಾಲಿಯಾದರೂ ಯಾರಿರಬಹುದು? ತನ್ನ ಯೋಚನೆಯು ಕೃಷ್ಣನಿಗೆ ಇಷ್ಟೂ ಇಲ್ಲವೆ? ರಾಧೆಯ ಉದ್ವೇಗವನ್ನು ಕವಿ ತುಂಬ ರಸವತ್ತಾಗಿ ಚಿತ್ರಿಸಿದ್ದಾನೆ. ಬೀಸುವ ಗಾಳಿಗೆ ರಾಧೆಯು ತನ್ನ ದುಃಖವನ್ನು ತೋಡಿಕೊಳ್ಳುತ್ತಾಳೆ.

> 'ಮನೋಭವಾನಂದನ ಚಂದನಾನಿಲ
> ಪ್ರಸೀದ ರೇ ದಕ್ಷಿಣ ಮುಂಚ ವಾಮತಾಂ;
> ಕ್ಷಣಂ ಜಗತ್ಪ್ರಾಣ ವಿಧಾಯ ಮಾಧವಂ
> ಪುರೋ ಮಮ ಪ್ರಾಣಹರೋ ಭವಿಷ್ಯಸಿ'

ರಾತ್ರಿಯು ಹೇಗೋ ಕಳೆಯಿತು. ಬೆಳಕು ಹರಿಯುವಲ್ಲಿ ರಾಧೆಯ ಮುಂದೆ ಕೃಷ್ಣನು 'ಅನುನಯವಚನ'ವನ್ನು ಹೇಳುತ್ತ ನಿಂತಿದ್ದಾನೆ. ಅವನಿಗಾಗಿ ಹಾತೊರೆದು ಪರಿತಪಿಸಿ ಕಂಗಾಲಾಗಿದ್ದ ರಾಧೆಗೆ ಈಗ ಅವನಲ್ಲಿ ಅಸೂಯೆ, ಕ್ರೋಧ.

ಸಿಟ್ಟಿನಿಂದ - "ಎಲೆ ವಂಚಕ, ಇಲ್ಲಿ ಬಂದುದೇಕೆ? ನೀನು ರಾತ್ರಿಯನ್ನು ಕಳೆದ ಕಾಮಿನಿಯ ಬಳಿಗೇ ಹೋಗು! ಇಲ್ಲಿ ನಿಲ್ಲಬೇಡ, ಹೊರಡು. ನಿನ್ನದು ಕಠೋರ ಸ್ವಭಾವ! ಎಳೆತನದಲ್ಲೇ ಪೂತನಿಯನ್ನು ಕೊಂದ ನಿನಗೆ ಕಾರುಣ್ಯವೆಲ್ಲಿ ಬಂತು? ನನ್ನ ಹೃದಯವನ್ನು ಕದ್ದು ಬೇರೊಬ್ಬಳ ಚುಂಬನಕ್ಕೆ ಹೋಗುವ

ದುರುಳ!" ಎಂದು ಮುಂತಾಗಿ ಮೂದಲಿಸುತ್ತಾಳೆ. ಕೃಷ್ಣ ಮ್ಲಾನವದನನಾಗಿ ನಿಂತಿದ್ದಾನೆ.

ಪರಿಹಾರ

ಈ ಪ್ರಣಯ ಕಲಹದ ಪರಿಹಾರಕ್ಕೆ ಸಖಿಯು ಮುಂದೆ ಬರುತ್ತಾಳೆ. ರಾಧೆಯನ್ನು ನಿಂದಿಸಿ ಅವಳಿಗೆ ಬುದ್ಧಿ ಹೇಳುತ್ತ -

'ಹರಿರಭಿಸರತಿ ವಹತಿ ಮಧುಪವನೇ
ಕಿಮಪರಮಧಿಕಸುಖಂ ಸಖಿ ಭವನೇ!
ಮಾಧವೆ ಮಾ ಕುರು ಮಾನಿನಿ ಮಾನಮಯೆ!
ತಾಲಫಲಾದಪಿ ಗುರುಮತಿಸರಸಂ'

ಎಂದಾಗ ರಾಧೆ ನಸುನಗುತ್ತ ಲಜ್ಜೆಯಿಂದ ಮುಖ ತಿರುಗಿಸಿ, ಕೃಷ್ಣನ ಕಡೆಗೆ ಓರೆನೋಟ ಬೀರುತ್ತಾಳೆ. ಅವಳ ಅಪಾಂಗ ದೃಷ್ಟಿಯಿಂದ ಉತ್ತೇಜಿತನಾದ ಕೃಷ್ಣನು ಪ್ರಿಯವಚನಗಳ ಹೊಳೆಯನ್ನೇ ಹರಿಸಲು ಮೊದಲಿಡುತ್ತಾನೆ. "ನೀನು ನನ್ನಲ್ಲಿ ನಿಜವಾಗಿ ಕೋಪಗೊಂಡಿದ್ದೇ ಆದರೆ ನಿನ್ನ ನಖಗಳಿಂದ ನನ್ನನ್ನು ಪರಚಿಬಿಡು, ನಿನ್ನ ತುಟಿಗಳಿಂದ ನನ್ನ ಹಲ್ಲನ್ನು ಮುರಿದುಬಿಡು; ನಿನ್ನ ತೋಳುಗಳ ಬಂಧನದಿಂದ ನನ್ನ ಮೂಳೆಗಳನ್ನು ಮುರಿ"! ಇದು ಪ್ರಣಯದ ಪ್ರತೀಕಾರ! ಮತ್ತೆ ಕೃಷ್ಣನು ಹೇಳುತ್ತಾನೆ-

'ತ್ವಮಸಿ ಮಮ ಜೀವನಂ, ತ್ವಮಸಿ ಮಮ ಭೂಷಣಂ
ತ್ವಮಸಿ ಮಮ ಭವಜಲಧಿ ರತ್ನಂ!
ಭವತು ಭವತೀಹ ಮಯಿ ಸತತಮನುರೋಧಿನೀ
ತತ್ರ ಮಮ ಹೃದಯಮತಿಯತ್ನಂ'

ಹಲವಾರು ಚಾಟುವಚನಗಳಿಂದ ಕೃಷ್ಣನು ರಾಧೆಯನ್ನು ಸಮಾಧಾನಗೊಳಿಸಿ ತನ್ನ ನಿಕುಂಜಕ್ಕೆ ಬರುವಂತೆ ಅವಳನ್ನು ಆಹ್ವಾನಿಸಿ

ಹೊರಡುತ್ತಾನೆ. ಕೃಷ್ಣನು ಕಣ್ಮರೆಯಾದೊಡನೆ ಸಖಿಯು ರಾಧೆಯನ್ನು ಸಜ್ಜುಗೊಳಿಸಿ ಸಂಜೆಯಂದು ಪ್ರದೋಷವು ಹರಡುತ್ತಿರುವಲ್ಲಿ ಕೃಷ್ಣನ ನಿಕುಂಜಕ್ಕೆ ಕರೆದೊಯ್ಯುತ್ತಾಳೆ. ಲಜ್ಜೆಯಿಂದ ವಿವರ್ಣವಾದರೂ 'ರಥಿರಭಸ ಹಸಿತನವದನೆ'ಯಾದ ರಾಧೆಯನ್ನು ಮಾಧವನ ಸಮೀಪದಲ್ಲಿ ಬಿಟ್ಟಾಗ ಸಖಿಯು ಕಂಡದ್ದು ಕೃಷ್ಣನ ಮುಖದಲ್ಲಿ ಸುಖವಾದ ಉದ್ವೇಗವನ್ನು.

> 'ರಾಧಾವದನ ವಿಲೋಕನ ವಿಕಸಿತ ವಿವಿಧ ವಿಕಾರವಿಭಂಗಂ!
> ಜಲನಿಧಿಮಿವ ವಿಧುಮಂಡಲದರ್ಶನ ತರಲಿತ ತುಂಗತರಂಗಂ'

ಚತುರೆಯಾದ ಸಖಿಯು ಅವರಿಬ್ಬರನ್ನೂ ಸಂದರ್ಭೋಚಿತವಾಗಿ ಬಿಟ್ಟು ಓರೆಯಾಗುತ್ತಾಳೆ.

ಅಖಿಲಲೋಕನಾಯಕನೂ, ಈ ಕಾವ್ಯದ ನಾಯಕನೂ ಆದ ಗೋವಿಂದನು ಕವಿಯಿಂದಲೂ ಗೋಪಿಯರಿಂದಲೂ ರಾಧೆಯಿಂದಲೂ ಅವಳ ಗೆಳತಿಯರಿಂದಲೂ ಗೀತನಾಗಿರುವುದು (ಎಂದರೆ ಎಲ್ಲರಿಂದಲೂ ಹಾಡಿ ಹೊಗಳಿಸಿಕೊಳ್ಳುವುದು) ಕಾವ್ಯದ ಸಾರೋದ್ಧಾರವಾದ ರಸ.

'ಸಾಮೋದ ದಾಮೋದರ'ವೆಂಬ ಮೊದಲ ಸರ್ಗದಲ್ಲಿ ದಶಾವತಾರ ವರ್ಣನೆ, ವಸಂತದ ವಿಜೃಂಭಣೆ; ಕಡೆಯದಾದ 'ಸುಪ್ರೀತ ಪೀತಾಂಬರ'ವೆಂಬ ಸರ್ಗದಲ್ಲಿ ರಾಧೆಯ (ಎಂದರೆ ಜೀವದ) ಸಮಾಗಮದಿಂದ ಒದಗಿದ ಆನಂದ. ಇವೆರಡರ ನಡುವೆ ಹತ್ತು ಸರ್ಗಗಳಲ್ಲಿ ರಾಧೆಯ ಹಮ್ಮು ಮುರಿದದ್ದು (ಅಕ್ಲೇಶ ಕೇಶವ), ಕೃಷ್ಣನ ಪಶ್ಚಾತ್ತಾಪ (ಮುಗ್ಧ ಮಧುಸೂದನ), ಸಖಿಯು ಕೃಷ್ಣನನ್ನು ಕಂಡು ರಾಧೆಯ ಸ್ಥಿತಿಯನ್ನು ಬಣ್ಣಿಸುವುದು (ಸ್ನಿಗ್ಧಮಾಧವ),

ಕೃಷ್ಣನು ರಾಧೆಗೆ ಸಂದೇಶವನ್ನು ಕಳುಹಿಸುವುದು (ಸಾಕಾಂಕ್ಷಪುಂಡರೀಕಾಕ್ಷ), ಸಖಿಯು ಮತ್ತೆ ಕೃಷ್ಣನ ಬಳಿಗೆ ಬಂದು ರಾಧೆಯ ಅಳಲನ್ನು ತಿಳಿಸುವುದು (ಧನ್ಯ ವೈಕುಂಠ ಕುಂಕುಮ); ಸೋತ್ಕಂಠ ವೈಕುಂಠ ಎಂದು ಇನ್ನೊಂದು ಹೆಸರು), ಮುಂಜಾನೆ ಕೃಷ್ಣನು ಬಂದು ಅಂಗಲಾಚುವುದು (ವಿಲಕ್ಷ್ಯ ಲಕ್ಷ್ಮೀಪತಿ), ಚಂದ್ರೋದಯವಾದರೂ ಕೃಷ್ಣನು ಬಾರದಿರುವುದು (ನಾಗನಾರಾಯಣ), ಕೃಷ್ಣನ ನಿರಾಶೆ (ಮುಗ್ಧ - ಮುಕುಂದ), ಸಂಜೆಯಾಗಲು ಕೃಷ್ಣನು ಹಿಂದಿರುಗಿಬಂದು ರಾಧೆಯನ್ನು ಒಲಿಸಿಕೊಳ್ಳುವುದು (ಚತುರಚತುರ್ಭುಜ), ಸಖಿಯು ರಾಧೆಯನ್ನು ಸಮಾಧಾನಗೊಳಿಸಿ ಕೃಷ್ಣನಲ್ಲಿ ಸೇರುವಂತೆ ಸೂಚಿಸುವುದು (ಸಾಮೋದ ದಾಮೋದರ; ಈ ಸರ್ಗಕ್ಕೆ 'ಸಾನಂದಗೋವಿಂದ' ಎಂಬ ಹೆಸರೂ ಇದೆ). ಇಷ್ಟಾದ ಮೇಲೆ ರಾಧೆಯ ಸಖಿಯರೆಲ್ಲರೂ ಮರೆಯಾಗಿ ರಾಧೆ, ಮಾಧವ ಇಬ್ಬರೇ ಇರುವುದು 'ಸುಪ್ರೀತ ಪೀತಾಂಬರ'. ಇದು ಸಾಯುಜ್ಯದ ಸಂಕೇತ; ಜೀವಾತ್ಮ - ಪರಮಾತ್ಮರ ಐಕ್ಯಭಾವ; ಮಧುರಭಕ್ತಿಯಲ್ಲಿ ಹಾಸು-ಹೊಕ್ಕಾಗಿರುವ ಮಧುರ ರತಿ. ಜೀವಾತ್ಮನನ್ನು ತನ್ನೆಡೆಗೆ ಕೊಂಡೊಯ್ಯ ಬೇಕೆಂಬ ಆಶಯವನ್ನು ಕವಿಯು ಹೀಗೆ ವ್ಯಕ್ತಪಡಿಸಿದ್ದಾನೆ -

> 'ಕಂಸಾರಿರಪಿ ಸಂಸಾರವಾಸನಾಬದ್ಧಶೃಂಖಲಾಂ।
> ರಾಧಾಮಾದಾಯ ಹೃದಯೇ ತ್ರತ್ಯಾಜ ವ್ರಜಸುಂದರೀಃ॥



ಪ್ರಶಸ್ತಿ

ಕಾವ್ಯ ಶೃಂಗಾರಪ್ರಧಾನವಾದದ್ದು; ಅದರ ವಸ್ತು ಪ್ರಣಯ. ಕವಿಯಂತೂ ರಸಿಕ. ತಾತ್ತ್ವಿಕವಾದ ಅರ್ಥ ಹೇಗೂ ಸಿದ್ಧ. ಅಂದಮೇಲೆ ಉಕ್ತಿಯಲ್ಲಿ ಅಶ್ಲೀಲ ಬರದಿರುವುದು ಸಾಧ್ಯವಿಲ್ಲ. ಗೀತಗೋವಿಂದದಲ್ಲಿ ಅಸಂಭಾವ್ಯ, ಅನುಚಿತ ಎನ್ನಬಹುದಾದ ಭಾವನೆಗಳೂ ಮಾತುಗಳೂ ಅಲ್ಲಲ್ಲಿ ಬರುವುದುಂಟು. ಅದನ್ನು ಕಾವ್ಯದೋಷ ಎನ್ನಲಾಗದು. ಕವಿಯೇ 'ಸಂದರ್ಭ ಶುದ್ಧಿಂ ಗಿರಾಂ ಜಾನೀತೇ ಜಯದೇವ ಏವ' ಎಂದು ಹೊಗಳಿಕೊಂಡಿದ್ದಾನೆ. ಅಲ್ಲದೆ ಕಾಮಪ್ರಚೋದನೆಯೇ ಪ್ರಯೋಜನವಾಗಿ ರಚಿಸಿದ ಕಾವ್ಯ ಅಲ್ಲ ಇದು, ಕವಿ ರಸಿಕನೂ ಹೌದು, ಕೃಷ್ಣಭಕ್ತನೂ ಹೌದು. ತನ್ನ ಕಾವ್ಯದ ವಿಚಾರವಾಗಿ ಅವನ ಮಾತು -

'ಯದಿ ಹರಿಸ್ಮರಣೇ ಸರಸಂ ಮನೋ
ಯದಿ ವಿಲಾಸಕಲಾಸು ಕುತೂಹಲಂ ;
ಮಧುರ ಕೋಮಲಕಾಂತ ಪದಾವಲೀಂ
ಶ್ರುಣು ತದಾ ಜಯದೇವಸರಸ್ವತೀಂ'

ಹರಿಸ್ಮರಣೆಯೇ ಕಾವ್ಯದ ಪರಮ ಪ್ರಯೋಜನ. ಶೃಂಗಾರವು 'ಅವಾಂತರ ಪ್ರಯೋಜನ'. ಸರ್ಗದ ಅಂಕಿತಶ್ಲೋಕಗಳಲ್ಲೂ 'ಶ್ರೀ ಜಯದೇವೇ ಕೃತಹರಿಸೇವೇ' ಇತ್ಯಾದಿಯಾಗಿ ಭಗವದ್ಭಕ್ತಿಯನ್ನೇ ಮುಖ್ಯಾರ್ಥವೆಂದು ಹೇಳಿದ್ದಾನೆ.

ಕಾಳಿದಾಸನಂಥ ಮಹಾಕವಿಗಳಲ್ಲಿ ಕಂಡುಬರುವ ನವನವೋನ್ಮೇಷ-ಶಾಲಿನಿಯಾದ ಪ್ರತಿಭೆಯು ಜಯದೇವನಲ್ಲಿ ಕಾಣಬರುವುದಿಲ್ಲ ದಿಟ; ಆದರೆ ರಸಪೋಷಣೆಯಲ್ಲಿ, ಪದವಿನ್ಯಾಸದಲ್ಲಿ, ಅರ್ಥಗಾಂಭೀರ್ಯದಲ್ಲಿ ಅವನು ಕಾಳಿದಾಸನಂತೆಯೇ ಸಮರ್ಥನಾದ ಕವಿ. ಒಂದೊಂದು ಶ್ಲೋಕದಲ್ಲೂ ಅವನ ಪ್ರೌಢಿಮೆ, ರಸಿಕತೆ ವ್ಯಕ್ತವಾಗುತ್ತವೆ. ಶ್ರುತಿಮನೋಹರವಾದ, ಅಕ್ಲಿಷ್ಟವಾದ, ಧ್ವನಿಪೂರ್ಣವಾದ ಪದಗಳನ್ನು ಮಧುರವಾಗಿ ಜೋಡಿಸುವುದರಲ್ಲಿ ಜಯದೇವನಿಗಿರುವಷ್ಟು ಜಾಣ್ಮೆ ಬೇರೊಬ್ಬ ಕವಿಗೆ ಇರದು. ನಿದರ್ಶನಕ್ಕೆ 'ಚಂದನ ಚರ್ಚಿತ ನೀಲ ಕಲೇವರ ಪೀತ ವಸನವನಮಾಲೀ'.... 'ಮಣಿಮಯ ಮುಕರಮನೋಹರ ಕುಂಡಲ ಮಂಡಿತಗಂಡಮುದಾರಂ' ಇತ್ಯಾದಿ ಪ್ರಯೋಗಗಳು.

ರಾಗಬದ್ಧವಾದ ವೃತ್ತಗಳನ್ನು ಹೆಣೆಯುವುದರಲ್ಲಂತೂ ಜಯದೇವನು ಚತುರ. ಕೇದಾರ, ಗುರ್ಜರೀ, ಗುಣಕರೀ, ದೇಶಾಂಕ, ಭೈರವ, ವರಾಢಿ, ವಿಭಾಸ ರಾಗಗಳಲ್ಲಿ ಸುಂದರವಾದ ಸರ್ಗಗಳನ್ನು ಗೇಯಗುಣಪ್ರಧಾನವಾಗಿ ರಚಿಸಿದ್ದಾನೆ. ಈ ದೃಷ್ಟಿಯಿಂದ ಗೀತಗೋವಿಂದ ಅತ್ಯುತ್ತಮ ಕಾವ್ಯ, ಶ್ರವ್ಯ ಸುಖಕ್ಕೆ ಪ್ರೌಢವಾದ ನಿದರ್ಶನ. ಈ ಗುಣವು ಇರುವುದರಿಂದಲೇ ಇದನ್ನು ಸಂಗೀತರೂಪಕವನ್ನಾಗಿ ಪರಿವರ್ತಿಸಲು ಸಾಧ್ಯ. ಕಾವ್ಯ ಪ್ರತಿಪಾದನೆಯ ದೃಷ್ಟಿಯಿಂದ ಜಯದೇವನು ಆಲಂಕಾರಿಕ ಲಕ್ಷಣಗಳನ್ನು ಕಟ್ಟುನಿಟ್ಟಾಗಿ ಅನುಸರಿಸಿದ್ದಾನೆ; ನಾಯಕ-ನಾಯಿಕಾ ಭಾವಗಳನ್ನು ಸೂಚಿಸುವಲ್ಲಿ, ಅಭಿಸಾರಿಕಾ-ವಾಸಕಸಜ್ಜಾ ಪಾತ್ರಗಳನ್ನು ನಿರೂಪಿಸುವಲ್ಲಿ, ವಸಂತಮಾಸವನ್ನು

ವರ್ಣಿಸುವಲ್ಲಿ, ಕವಿಗೆ ಲಕ್ಷಣ ಗ್ರಂಥಗಳ ಮೇಲಿರುವ ವಿಶ್ವಾಸವು ಪ್ರಕಟವಾಗುತ್ತದೆ. ಈ ಕಾವ್ಯದಲ್ಲಿ ಜಯದೇವನ ಪಾಂಡಿತ್ಯ, ಪ್ರತಿಭೆ, ರಸಿಕತೆ, ಭಕ್ತಿಗಳೆಲ್ಲದರ ಮಧುರ ಸಮಾವೇಶವಾಗಿದೆ.

ಈ ಗೀತಕಾವ್ಯದಲ್ಲಿ ನಾವು ಕಾಣುವುದು ಭಾವಾತಿರೇಕವನ್ನು, ಕವಿಯು ತನ್ನದೇ ಆದ ರಾಗಪರಿಪೂರ್ಣವಾದ ಅನುಭವದಿಂದಲೇ ವಸ್ತುವನ್ನು ಕಲ್ಪಿಸಿಕೊಂಡಿದ್ದಾನೆ. ಹಾಗಿರುವುದರಿಂದಲೇ ವಸ್ತುವು ಭಾವಾತ್ಮಕವಾಗಿ ಪರಿಣತವಾಗಿದೆ. ವಸ್ತು ಹೊರಗಿನಿಂದ ಬಂದದ್ದಲ್ಲ; ತನ್ನ ಅಂತರಾಳದಲ್ಲೇ, ಮಾನಸರಂಗದಲ್ಲೇ ಅಲೆ ಅಲೆಯಾಗಿ ತೋರಿಕೊಂಡ ಭಾವನೆಗಳನ್ನು ಕವಿ ಇಲ್ಲಿ ಮಧುರ ಪೇಶಲ ಭಾವದಿಂದ ಸಂಗ್ರಹವಾಗಿಯೂ ಗೇಯ ಸಮರ್ಥವಾಗಿಯೂ ಅಭಿವ್ಯಕ್ತಿಗೊಳಿಸಿದ್ದಾನೆ. ವರ್ಣನೆಗೆ ಬಂದಿರುವ ವಿವರಗಳು ಕವಿಯ ಒಡಲೊಳಗೇ ಒಡಮೂಡಿಬಂದಿರುವಂಥವು. ಹಾಗೆಂದೇ ಕವಿಗೆ ತನ್ನ ಉಕ್ತಿಯಲ್ಲಿ ಪಾರವಶ್ಯ, ತನ್ಮಯತೆ.

ಇದು ವಿಶೇಷವಾಗಿ ಗೇಯಕಾವ್ಯ. ಇದರಲ್ಲಿ ಶ್ರವಣ ಸುಭಗವಾದ ಪದಬಂಧಗಳನ್ನು ಹೆಜ್ಜೆಹೆಜ್ಜೆಗೆ ಕಾಣಬಹುದು. ಕವಿಯ ಒಕ್ಕಣೆ ಯಾವುದೇ ಭಾವದಲ್ಲೂ ಶ್ರುತಿಸುಖ. ಹನ್ನೆರಡು ಸರ್ಗಗಳಲ್ಲಿ ಹರಡಿಕೊಂಡಿರುವ ಇಪ್ಪತ್ತುನಾಲ್ಕು ಪ್ರಬಂಧಗಳಂತೂ ರಾಗ ತಾಳ ಲಯಗಳಿಂದ ತುಂಬಿ ತುಳುಕುತ್ತವೆ. ಪ್ರಗಲ್ಭ ವಿಮರ್ಶಕರೊಬ್ಬರು ಹೇಳಿರುವಂತೆ ಇವು 'ಲಯಾನುಬಂಧಿನೀ ತಾಲವ್ಯದಂತ್ಯವರ್ಣಮಯೀ, ಅಸಂಯುಕ್ತ ವರ್ಣಮಯೀ, ಯತಿಸ್ಥಾನಸುವಿಶ್ರಾಂತ ಪದವಾಕ್ಯ ರುಚಿರಾ' (ನನ್ನ

ಗುರುಗಳಾದ ರಾಳ್ಳಪಲ್ಲಿ ಅನಂತಕೃಷ್ಣ ಶರ್ಮರ ಮಾತುಗಳು). ಅಷ್ಟಪದಿಗಳ ವಿಂಗಡಣೆ ಹೀಗಿದೆ -

ಸರ್ಗ 1 - ಅಷ್ಟಪದಿಗಳು 1 ರಿಂದ 4
ಸರ್ಗ 2 - ಅಷ್ಟಪದಿಗಳು 5 ರಿಂದ 6
ಸರ್ಗ 3 - ಅಷ್ಟಪದಿಗಳು 7
ಸರ್ಗ 4 - ಅಷ್ಟಪದಿಗಳು 8 ರಿಂದ 9
ಸರ್ಗ 5 - ಅಷ್ಟಪದಿಗಳು 10 ರಿಂದ 11
ಸರ್ಗ 6 - ಅಷ್ಟಪದಿಗಳು 12
ಸರ್ಗ 7 - ಅಷ್ಟಪದಿಗಳು 13 ರಿಂದ 16
ಸರ್ಗ 8 - ಅಷ್ಟಪದಿಗಳು 17
ಸರ್ಗ 9 - ಅಷ್ಟಪದಿಗಳು 18
ಸರ್ಗ 10 - ಅಷ್ಟಪದಿಗಳು 19
ಸರ್ಗ 11 - ಅಷ್ಟಪದಿಗಳು 20 ರಿಂದ 22
ಸರ್ಗ 12 - ಅಷ್ಟಪದಿಗಳು 23 ರಿಂದ 24

ಕಡೆಯಲ್ಲಿ ಜಯದೇವನದೇ ಶುಭಾಶಂಸನವನ್ನೂ ಗಮನಿಸಬೇಕು-

'ಶ್ರೀಜಯದೇವಭಣಿತಮಿದಮದ್ಭುತಕೇಶವಕೇಲಿರಹಸ್ಯಂ।
ವೃಂದಾವನವಿಪಿನೇ ಲಲಿತಂ ವಿತನೋತು ಶುಭಾನಿ ಯಶಸ್ಯಂ॥' (1,6)

'ವ್ಯಾಪಾರಾಃ ಪುರುಷೋತ್ತಮಸ್ಯ ದದತು ಸ್ಫೀತಾಂ ಮುದಾಂ ಸಂಪದಂ॥'
(12, 13)

ಜಯದೇವನ ಗೀತಗೋವಿಂದಕಾವ್ಯವನ್ನನುಕರಿಸಿ ಸಿದ್ಧವಾದ ಹಲವಾರು ಗೀತಕಾವ್ಯಗಳಿವೆ. ಇವುಗಳಲ್ಲಿ ಹರಿಶಂಕರನ ಗೀತರಾಘವ, ರಾಮಭಟ್ಟನ ಗೀತಗಿರೀಶ, ವಂಶಮಣಿಯ ಗೀತದಿಗಂಬರ, ಪುರುಷೋತ್ತಮ

ಮಿಶ್ರನ ಅಭಿನವಗೀತಗೋವಿಂದ, ಚತುರ್ಭುಜನ ಗೀತಗೋಪಾಲ, ಸದಾಶಿವ ದೀಕ್ಷಿತನ ಗೀತಸುಂದರ, ಅನಂತನಾರಾಯಣನ ಗೀತಶಂಕರ, ತಿರುಮಲನ ಗೀತಗೌರೀ ಮುಂತಾದವು ಸೇರುತ್ತವೆ. ಚಿಕ್ಕದೇವರಾಜ ಒಡೆಯರು (1673-1704) ಕನ್ನಡದಲ್ಲಿ ರಚಿಸಿರುವ ಗೀತ ಗೋಪಾಲ ಈ ಗುಂಪಿಗೇ ಸೇರುತ್ತದೆ. ಇದರ ಉದ್ದೇಶ ಶರಣಾಗತಿಯ ಹೆಗ್ಗಳಿಕೆಯನ್ನು ಎತ್ತಿತೋರಿಸುವುದು. ಕಳಲೆ ನಂಜರಾಜನು (ಕರಾಚೂರಿ ನಂಜರಾಜಯ್ಯ) ಸಂಸ್ಕೃತದಲ್ಲೇ ಗೀತ ಗಂಗಾಧರವನ್ನು ರಚಿಸಿದ್ದಾನೆ ; ಶಿವಪಾರ್ವತಿಯರ ಪ್ರಣಯವೇ ಮುಖ್ಯವಾಗಿ ಉಳ್ಳ ಇದರಲ್ಲಿ ಗೀತಗೋವಿಂದದಲ್ಲಿರುವಂತೆಯೇ ಇಪ್ಪತ್ತುನಾಲ್ಕು ಅಷ್ಟಪದಿಗಳಿಗೆ; ಎಪ್ಪತ್ತೆರಡು ಶ್ಲೋಕಗಳೂ ಇವೆ. ಇವಲ್ಲದೆ ಅಷ್ಟಪದಿಯ ಅನುಕರಣೆಗೆ ಹೆಸರಾದ ವೆಂಕಟಮಖಿಯ ತ್ಯಾಗರಾಜಾಷ್ಟಪದಿ, ಉಪನಿಷದ್ ಬ್ರಹ್ಮೇಂದ್ರರ ರಾಮಾಷ್ಟಪದಿ ಮೊದಲಾದವೂ ಇವೆ.

ಕಾಂಚೀಮಠದ ಚಂದ್ರಶೇಖರೇಂದ್ರ ಸರಸ್ವತಿ ಎಂಬುವರು ಶಿವಗೀತಮಾಲಿಕೆಯನ್ನು ಇದೇ ಪದ್ಧತಿಯಲ್ಲಿ ರಚಿಸಿದ್ದಾರೆ. ಲಕ್ಷ್ಮಣನ ಮಗ ಧುಂಡಿರಾಜಕವಿಯು ತಂಜಾವೂರು ಷಾಹಜಿದೊರೆಯ ಆಸ್ಥಾನದಲ್ಲಿ ಪೌರಾಣಿಕನಾಗಿದ್ದವನು; ಅಭಿನವ ಜಯದೇವನೆಂದು ತನ್ನನ್ನು ಕರೆದುಕೊಂಡು ತನ್ನ ಧಣಿ ಷಾಹಜಿಯನ್ನು ಕುರಿತಂತೆ ಷಾಹಾವಿಲಾಸಗೀತವೆಂಬ ಕೃತಿಯನ್ನು ರಚಿಸಿದ್ದಾನೆ. ಎಂಟು ರಾಗಗಳಲ್ಲಿರುವ ಇದರಲ್ಲಿ ಜಯದೇವನ ಅನುಕರಣೆಯನ್ನು ಕಾಣಬಹುದು. ನಿದರ್ಶನಕ್ಕೆ ಜಯದೇವನ 'ಧೀರಸಮೀರೇ ಯಮುನಾತೀರೇ' ಎಂಬ ಕವಿತೆಯನ್ನು ಹೀಗೆ ಅಳವಡಿಸಿಕೊಂಡಿದ್ದಾನೆ -

'ಷಾಹ ಮಹೀಶೇ' ಸುದತಿಸಕಾಶೇ
ಚಲತಿ ತವಾನು ವನಾಂತಂ।
ನ ಚಲಸಿ ಕಥಮಿವ ಕಿಮಿವ ನಿಷೀದಸಿ
ಪುನರನುಸರ ನಿಶಿ ಕಾಂತಂ॥

ಮೂಲಕ್ಕೆ ಹೋಲಿಸಿದಾಗ ಇದು ಎಷ್ಟು ಬರಡಾಗಿದೆ ಎಂಬುದು ತಟ್ಟನೆ ಕಾಣುತ್ತದೆಯಲ್ಲವೆ? ಜಯದೇವನನ್ನು ಅನುಕರಿಸುವುದು ತುಂಬ ಕಷ್ಟ!

ಅಷ್ಟಪದಿಯೆನ್ನುವುದು ದ್ವಿಧಾತುಪ್ರಬಂಧ. ಇದರಲ್ಲಿ ಎರಡು ಭಾಗಗಳಿರುವುದು ವಾಡಿಕೆ. ಉದ್ಗ್ರಾಹವೆಂಬುದು ಒಂದು, ಧ್ರುವವೆನ್ನುವುದು ಇನ್ನೊಂದು. ಅಷ್ಟಪದಿಗಳು ಸಾಮಾನ್ಯವಾಗಿ ಅಭಿನಯಕ್ಕೆ ಸಲ್ಲುತ್ತವೆ. ಕೆಲವೊಮ್ಮೆ ಪ್ರಾಸ (ಹೆಚ್ಚಿಗೆ ಅಂತ್ಯಪ್ರಾಸ), ರಾಗವನ್ನನುಸರಿಸಿ ಭಾವವ್ಯಂಜನೆಗೆ ಅನುಗುಣವಾದ ಪದಬಂಧ ಇವೂ ಇರುತ್ತವೆ. ಭಾವಗೀತೆಯೂ ಅಲ್ಲ, ನಾಟಕವೂ ಅಲ್ಲ ಎಂಬಂತೆ ಇರುವುದು ಅಷ್ಟಪದಿಗಳ ಸ್ವಾರಸ್ಯ.

ಜಯದೇವನ ಗೀತಗೋವಿಂದ ರಚಿತವಾದ ಕಾಲದಲ್ಲಿ ಅದರ ಗೇಯರೂಪ ಹೇಗಿದ್ದಿತೋ ತಿಳಿಯುಬರುವುದಿಲ್ಲ. ಈ ಕಾವ್ಯಕ್ಕೆ ರಾಗತಾಳಗಳನ್ನು ಸಂಯೋಜನೆ ಮಾಡಿ ಅದರ ಗೇಯವ್ಯವಸ್ಥೆಗೆ ಕಾರಣನಾದವನು ಮೇವಾಡದ ದೊರೆಯಾಗಿದ್ದ ರಾಣಾಕುಂಭ ಎಂಬುವನು. ಗೀತಗೋವಿಂದದ ರಚನೆಗೂ ಇವನ ಕಾಲಕ್ಕೂ ಸುಮಾರು ಇನ್ನೂರು ವರ್ಷಗಳ ಅಂತರ. ಈ ಅವಧಿಯಲ್ಲಿ ಗೀತಗೋವಿಂದವನ್ನು ಹೇಗೆ ಹಾಡುತ್ತಿದ್ದರೋ ಅದೂ ತಿಳಿಯದು. ಅವನ ಒಕ್ಕಣೆಯಿಂದ ತಾನೇ ಗೀತಗೋವಿಂದ ಪ್ರಬಂಧಕ್ಕೆ ರಾಗ-ತಾಳಗಳನ್ನು ಹೊಸದಾಗಿ ಸಿದ್ಧಪಡಿಸಿದಂತೆ ತಿಳಿದುಬರುತ್ತದೆ -

'ಪ್ರತ್ಯಜ್ಞಾಯಿ ಪ್ರಬಂಧೋ ಯೋ ಜಯದೇವೇನ ಧೀಮತಾ।
ನ ತಸ್ಯ ವಿದ್ಯತೇ ಲಕ್ಷ್ಮ ಸರ್ವಾಂಗೈರುಪಲಕ್ಷಿತಂ ॥
ಗೀತೇ ಜಯದೇವಕೃತೇ ಧಾತುಂ ಕುಂಭೋ ನೃಪಸ್ತನುತೇ।
ಸ್ವರಪಾಟ

ಇದು ಹಿಂದುಸ್ಥಾನೀ ಸಂಗೀತಕ್ಕೆ ಒಪ್ಪುವ ಗೇಯ ಪ್ರಕಾರವಾಯಿತು. ಮುಂದೆ ತಿರುಮಲರಾಜಪಟ್ಟಣದ ರಾಮುಡು ಭಾಗವತರೆಂಬುವರು ಕರ್ನಾಟಕ ಸಂಗೀತದ ಗೇಯಸ್ವರೂಪವನ್ನು ಈ ಕಾವ್ಯಕ್ಕೆ ಅಳವಡಿಸಿದರು. ಗೀತ ಗೋವಿಂದವು ದಕ್ಷಿಣದೇಶದಲ್ಲೆಲ್ಲ ಗಾಯಕರಿಗೂ ಭಾಗವತರಿಗೂ ಪ್ರಿಯವಾದ ರಚನೆಯೆನಿಸಿತು. ಕೇರಳದ ಕಥಕಳಿಯಲ್ಲೂ, ಕೃಷ್ಣನಾಟಕದಲ್ಲೂ ಸೋಪಾನಸಂಗೀತದಲ್ಲೂ ಜಯದೇವನ ಅಷ್ಟಪದಿಗಳು ತಮ್ಮ ಪ್ರಭಾವವನ್ನು ಬೀರಿವೆ. ಮೈಸೂರಿನ ಕಡೆ ಬೆಳೆದು ಬಂದ ಭರತನಾಟ್ಯಶೈಲಿಯಲ್ಲಿ ಅಷ್ಟಪದಿಗಳ ಅಭಿನಯ ತುಂಬ ಮುಖ್ಯವಾಗಿದ್ದಿತು.

ಇದಕ್ಕೆಂದೇ ಈ ಕಡೆಯ ಭರತನಾಟ್ಯದ ಕಲಾವಿದರು ಸಂಸ್ಕೃತದಲ್ಲಿ ಉತ್ಪತ್ತಿಯನ್ನು ಪಡೆದು ಕೊಂಡಿರುತ್ತಿದ್ದರು. ಮಹಾರಾಷ್ಟ್ರದಲ್ಲೂ ಗುಜರಾತಿನಲ್ಲೂ ಜಯದೇವನ ಜನಪ್ರಿಯತೆ ಹೆಚ್ಚಿನದು. ಪ್ರತಾಪರುದ್ರದೇವನೆಂಬ ರಾಜನು (ಹದಿನಾರನೆಯ ಶತಮಾನ) ಗೀತಗೋವಿಂದ ಕಾವ್ಯವನ್ನು ಉತ್ಕಲದ ದೇವಾಲಯವೊಂದರಲ್ಲಿ ಹಾಡುವವರಿಗೆ ಭೂದಾನವನ್ನು ಮಾಡಿರುವ ಉಲ್ಲೇಖವಿದೆ. ಇವನು ಕೃಷ್ಣಚೈತನ್ಯನ ಶಿಷ್ಯವರ್ಗಕ್ಕೆ ಸೇರಿದವನೆಂದು ಪ್ರತೀತಿ.

ಗೀತಗೋವಿಂದಕ್ಕೆ ಹಲವಾರು ವ್ಯಾಖ್ಯಾನಗಳಿವೆ. ಕಾವ್ಯಕ್ಕೆ ಗೇಯತೆಯನ್ನು ಒದಗಿಸಿಕೊಟ್ಟ ಮೇವಾಡದ ದೊರೆ ರಾಣಾ ಕುಂಭನೇ (ಹದಿನಾಲ್ಕನೆಯ ಶತಮಾನ) ಒಂದು ವ್ಯಾಖ್ಯಾನವನ್ನೂ ಬರೆದಿದಾನೆ; ಅದರ ಹೆಸರು 'ರಸಿಕಪ್ರಿಯಾ'. ಶಂಕರಮಿಶ್ರನದೊಂದು 'ರಸಮಂಜರಿ'ಯೆಂಬ

ವ್ಯಾಖ್ಯಾನವಿದೆ. ಅರವೀಡುವಂಶದ ದೊರೆ ತಿರುಮಲರಾಯನು ಪೆನುಗೊಂಡೆಯಲ್ಲಿ ಆಳುತ್ತಿದ್ದಾಗ (1567-1575) ಅವನ ಆಸ್ಥಾನದಲ್ಲಿದ್ದ ಚೇರುಕುರಿ ಲಕ್ಷ್ಮೀಧರನೆಂಬ ಪಂಡಿತನು ಈ ಕಾವ್ಯಕ್ಕೆ 'ಶ್ರುತಿರಂಜನೀ' ಎಂಬ ವ್ಯಾಖ್ಯಾನವನ್ನು ಸಿದ್ಧಗೊಳಿಸಿದ್ದಾನೆ. ಕೃಷ್ಣದತ್ತನ 'ಶಶಿಲೇಖಾ', ಜಗದ್ಧರನ 'ಸಾರದೀಪಿಕಾ' ಇವೂ ವ್ಯಾಖ್ಯಾನಗಲಿವೆ.

ಗೋಪಾಲನೆಂಬುವನು ಈ ಕಾವ್ಯಕ್ಕೆ 'ದೀಪಿಕಾ' ಎಂಬ ಟೀಕೆಯನ್ನು ರಚಿಸಿದ್ದಾನೆ. ಇದರಲ್ಲಿ ಜಯದೇವನ ಕತೆಯೂ ಉಪೋದ್ಘಾತದಲ್ಲಿ ಬರುತ್ತದೆ. ಗೀತಗೋವಿಂದ ಕಾವ್ಯದ ನಡೆಯನ್ನೂ ಸ್ವಾರಸ್ಯವಾಗಿ ಟೀಕಾಕಾರನು ಚಿತ್ರಿಸಿದ್ದಾನೆ. ಗ್ರಂಥದ ತಾತ್ಪರ್ಯವು ಆಧ್ಯಾತ್ಮಿಕವಾದುದು ಎಂದೇ ಅವನ ಎಣಿಕೆ. ಅವನ ಮಾತುಗಳನ್ನೇ ಕೇಳಿ (94-95) -

'ಸದ್ಗೀತಗೋವಿಂದ ಮಹಾಪ್ರಬಂಧ ಪೂರ್ವ
ಪ್ರಸಂಗೋಽಭಿಹಿತೋ ಮಯೈಷಃ|
ಗ್ರಂಥಸ್ಯ ತಾತ್ಪರ್ಯಮುದೀರ್ಯ ಸಮ್ಯಕ್
ರಹಸ್ಯಮೇವೇತ್ಯುಪಸಂಹರಿಷ್ಯೇ||
ತಸ್ಮೈ ಪ್ರಸನ್ನೋ ಜಗದೀಶ್ವರೋಽಸೌ
ಸಂದರ್ಶ್ಯ ಚಾತ್ಮಾನಮಚಿಂತ್ಯರೂಪಂ|
ಪ್ರದತ್ತವಾಂಸ್ತತ್ತ್ವಧಿಯಂ ತತೋಽಂತೇ
ಸಾಯುಜ್ಯಮುಕ್ತಿಂ ಸ ಜಗಾಮ ಶಾಂತಃ||

ಜಯದೇವನು ಬಂಗಾಳದ ದೊರೆ ಲಕ್ಷ್ಮಣಸೇನನ ಆಸ್ಥಾನದಲ್ಲಿದ್ದವನು. ಅವನ ಆಸ್ಥಾನದಲ್ಲಿ ಐವರು ಮಹಾಕವಿಗಳು ಪಂಚರತ್ನಗಳೆಂದು ಹೆಸರಾಗಿದ್ದರೆಂದು ಸನಾತನಗೋಸ್ವಾಮಿಯ ಹೇಳಿಕೆಯಿದೆ -

'ಗೋವರ್ಧನಶ್ಚ ಶರಣೋ ಜಯದೇವ ಉಮಾಪತಿಃ।
ಕವಿರಾಜಶ್ಚ ರತ್ನಾನಿ ಸಮಿತೌ ಲಕ್ಷ್ಮಣಸ್ಯ ಚ॥'

ಆದರೆ ಗೀತಗೋವಿಂದದಲ್ಲೇ ಕಾಣಸಿಗುವ ಒಕ್ಕಣೆಯಂತೆ (1, 4) ಧೊಯೀ ಎಂಬ ಇನ್ನೊಬ್ಬ ಕವಿಯೂ ಸೇರುತ್ತಾನೆ -

'ವಾಚಃ ಪಲ್ಲವಯತ್ಯುಮಾಪತಿಧರಃ
ಸಂದರ್ಭಶುದ್ಧಿಂ ಗಿರಾಂ ।
ಜಾನೀತೇ ಜಯದೇವ ಏವ ಶರಣಃ
ಶ್ಲಾಘ್ಯೋ ದುರೂಹದ್ಯುತೇಃ ।
ಶೃಂಗಾರೋತ್ತರ ಸತ್ಪ್ರಮೇಯ ವಚನೈ
ರಾಚಾರ್ಯಗೋವರ್ಧನ :
ಸ್ಪರ್ಧೀ ಕೋಽಪಿ ನ ವಿಶ್ರುತಃ ಶ್ರುತಿಧರೋ
ಧೋಯೀ ಕವಿಃ ಕ್ಷ್ಮಾಪತಿಃ ॥

ಇವರೆಲ್ಲರೂ ಜಯದೇವನ ಓರಗೆಯವರು, ಸ್ನೇಹಿತರು, ಅವನಂತೆಯೇ ಪ್ರತಿಭಾಶಾಲಿಗಳು, ಕವಿಗಳು. ಅವರಲ್ಲಿ ಗೋವರ್ಧನನೆಂಬುವನು ನೀಲಾಂಬರ ಸೋಮಯಾಜಿಯ ಮಗ. ಅವನ ಕೃತಿಗಳಲ್ಲಿ ಪ್ರಸಿದ್ಧವಾದದ್ದು 'ಆರ್ಯಾಸಪ್ತಶತೀ'. ಹೆಸರೇ ಹೇಳುವಂತೆ ಆರ್ಯಾವೃತ್ತದಲ್ಲಿ ಏಳುನೂರು ಶ್ಲೋಕಗಳ ಗ್ರಂಥ ಇದು. ಇಲ್ಲಿ ಶೃಂಗಾರವೇ ಮುಖ್ಯರಸ. ನಾಯಕ-ನಾಯಿಕೆಯರ ಲಕ್ಷಣಗಳನ್ನು ಸಂವಾದ ಪದ್ಧತಿಯಲ್ಲಿ ತಿಳಿಸಿಕೊಡುತ್ತದೆ. ನಾಯಕಿಯು ಬೇರೊಬ್ಬಳು ಸ್ತ್ರೀಯಲ್ಲಿ ಮೋಹಗೊಂಡವನು ತನ್ನ ನಾಯಕನೆಂದು ಹಲುಬುವಾಗ ಸಖಿ ಅವಳನ್ನು ಕುರಿತು ಹೇಳುವ ಮಾತನ್ನು ನೋಡಿ -

'ಅನ್ಯಾಸ್ವಪಿ ಗೃಹಿಣೀತಿ ಧ್ಯಾಯನ್ನ -
ಭಿಲಷಿತಮಾಪ್ನೋತಿ ।
ಪಶ್ಯನ್ ಪಾಷಾಣಮಯೀಂ ಪ್ರತಿಮಾಂ
ಇವ ದೇವತಾತ್ವೇನ ॥

ನಿನ್ನ ನಾಯಕನು ಬೇರೆಯಾವಳೋ ಹೆಂಗುಸಿನಲ್ಲಿ ಮನಸ್ಸನ್ನಿಟ್ಟು ಅವಳೇ ತನ್ನ ಮಡದಿಯೆಂದು ತಿಳಿದು ತನ್ನ ಇಷ್ಟಾರ್ಥವನ್ನು ಪಡೆದುಕೊಳ್ಳುತ್ತಾನೆ. ಹೇಗೆ ಬಲ್ಲೆಯಾ? ಕಲ್ಲಿನ ಪುತ್ಥಳಿಯನ್ನು ದೇವತೆಯೆಂದು ಭ್ರಮಿಸಿ ತನ್ನ ಇಷ್ಟಾರ್ಥಗಳನ್ನು ಪಡೆದುಕೊಳ್ಳುವ ಭಕ್ತನಂತೆ!

ಉಮಾಪತಿಧರ (ಉಮಾಪತ್ಯುಪಾಧ್ಯಾಯ) 'ಕವಿಪಂಡಿತ ಮುಖ್ಯ'ನೆಂದೂ 'ಮಹಾಮಹೋಪಾಧ್ಯಾಯ'ನೆಂದೂ ಹೆಸರಾದವನು. ಅವನ ರಚನೆಗಳು ಅನೇಕವಾಗಿ 'ಸದುಕ್ತಿಕರ್ಣಾಮೃತ'ದಲ್ಲಿ ಉಲ್ಲೇಖ ಗೊಂಡಿವೆ. ಅವನ ಕೃತಿಗಳಲ್ಲಿ 'ಪಾರಿಜಾತಹರಣ' ಮುಖ್ಯವಾದುದು. ನಾರದನು ಕೃಷ್ಣನಿಗೆ ತಂದುಕೊಟ್ಟ ಪಾರಿಜಾತದ ಹೂವನ್ನು ಕೃಷ್ಣನು ರುಕ್ಮಿಣಿಗೆ ಕೊಟ್ಟದ್ದು, ಅದರಿಂದ ಸಿಟ್ಟಿಗೆದ್ದ ಸತ್ಯಭಾಮೆಯು ತನಗೂ ದೇವಲೋಕದಿಂದ ಪಾರಿಜಾತವನ್ನು ತರಿಸಿಕೊಡೆಂದು ನಿರ್ಬಂಧ ಮಾಡಿದ್ದು, ಕೃಷ್ಣ ಈ ಹೂವುಗಳಿಗಾಗಿ ಇಂದ್ರನಿಗೆ ಹೇಳಿ ಕಳುಹಿಸಿದಾಗ ಇಂದ್ರನು ಒಪ್ಪದಿದ್ದದ್ದು, ಕೃಷ್ಣನು ಇಂದ್ರನೊಂದಿಗೆ ಅರ್ಜುನನ ನೆರವಿನಿಂದ ಕಾದಾಡಿ ಅವನನ್ನು ಸೋಲಿಸಿ, ಪಾರಿಜಾತವನ್ನು ಸತ್ಯಭಾಮೆಗೆ ತಂದುಕೊಟ್ಟದ್ದು ಇದು ಇಲ್ಲಿನ ಕಥೆ. ಅದರ ಸ್ವಾರಸ್ಯವಾದ ಭಾಗವೆಂದರೆ ಸತ್ಯಭಾಮೆ - ಕೃಷ್ಣರ ಪ್ರಣಯಕಲಹ.

ಶರಣ (ಶರಣದೇವ) ಎಂಬುವನು ಬೌದ್ಧಮತಾನುಯಾಯಿ ('ನತ್ವಾ ಶರಣದೇವೇನ ಸರ್ವಜ್ಞಂ ಜ್ಞಾನಹೇತವೇ'). ಅವನು ರಚಿಸಿದ 'ದುರ್ಘಟವೃತ್ತಿ' ಎಂಬ ವ್ಯಾಕರಣ ಗ್ರಂಥವು ಕ್ರಿಸ್ತಾಬ್ದ 1170ರಲ್ಲಿ ಸಿದ್ಧವಾಯಿತೆಂದು ತಿಳಿದುಬರುತ್ತದೆ. ಇದರಲ್ಲಿ ಎಂಟು ಅಧ್ಯಾಯಗಳಿವೆ; ಒಂದೊಂದು ಅಧ್ಯಾಯದಲ್ಲೂ ನಾಲ್ಕು ಪ್ರಕರಣಗಳು. ಆದರೆ ಈ ಗ್ರಂಥವನ್ನು ಸರ್ವರಕ್ಷಿತನೆಂಬ ಬೌದ್ಧ ಆಚಾರ್ಯನು ಪರಿಷ್ಕರಿಸಿದಂತೆ ತೋರುತ್ತದೆ ('ಶ್ರೀ ಸರ್ವರಕ್ಷಿತೇನೈಷಾ ಸಂಕ್ಷಿಪ್ತ ಪ್ರತಿಸಂಸ್ಕೃತಾ').

ಧೋಯಿ (ದುಹಿಸೇನ) ಎಂಬುವನು ಪುಂಡರೀಕಾಕ್ಷಸೇನನೆಂಬ ಪಂಡಿತನ ಮಗ ; ಪ್ರತಿಭಾಶಾಲಿಯಾದ ಕವಿ. ಅವನ ಕೃತಿ 'ಪವನದೂತ'ವೆಂಬುದು; ತನ್ನ ಒಡೆಯ ಲಕ್ಷ್ಮಣಸೇನನು ದಕ್ಷಿಣಭಾಗಕ್ಕೆ ದಿಗ್ವಿಜಯಾರ್ಥವಾಗಿ ಹೋದದ್ದು, ಅಲ್ಲಿನ ರಾಜರನ್ನೆಲ್ಲ ಅವನು ಗೆದ್ದದ್ದು ('ದಾಕ್ಷಿಣಾತ್ಯಾನ್ ಕ್ಷಿತೀಶಾನ್'), ಮಲಯಪರ್ವತದ ತಪ್ಪಲಲ್ಲಿ ಅವನು ತಂಗಿದ್ದಾಗ, ಅಲ್ಲಿ ಕುವಲಯವತಿಯೆಂಬ ಗಂಧರ್ವಕನ್ನಿಕೆ ಅವನಲ್ಲಿ ಮೋಹಗೊಂಡು ಮಲಯಸಮೀರಣ (ತಂಗಾಳಿ)ವನ್ನೆ ದೂತನನ್ನಾಗಿ ಮಾಡಿಕೊಂಡು ಲಕ್ಷ್ಮಣಸೇನನಿಗೆ ಸಂದೇಶವನ್ನು ಕಳುಹಿಸುವುದು ಕತೆ. ಕವಿಯು ತಾನೇ ಕಲ್ಪಿಸಿಕೊಂಡಿರುವ ಕತೆ ಇದು.

ಹೀಗೆ ಜಯದೇವನು ಬದುಕಿಬಾಳಿದ್ದು ಪ್ರತಿಭಾಶಾಲಿಗಳ ಪರಿಸರದಲ್ಲೇ. ಅವರಲ್ಲೆಲ್ಲ ಅಜರಾಮರವಾದ ಕೀರ್ತಿಯನ್ನು ಪಡೆದುಕೊಂಡವನೆಂದರೆ ಜಯದೇವನೇ. ಅವನ ಕಾವ್ಯದ ಹೆಗ್ಗಳಿಕೆಯನ್ನು ತಿಳಿಯಹೇಳುವ ಹಳೆಯ ಕತೆಯೊಂದನ್ನೂ ಹೇಳಬೇಕು. ಜಯದೇವನು ಈ ಕಾವ್ಯವನ್ನು ರಚಿಸಿದ ತರುಣದಲ್ಲಿ, ಅದನ್ನು ಆ ಊರಿನ ದೊರೆಯೆದುರು ಓದಿದನಂತೆ. ದೊರೆಯು ಅದನ್ನು ತುಂಬ ಮೆಚ್ಚಿಕೊಂಡನಾದರೂ, ಜಯದೇವನಲ್ಲಿ ಅಸೂಯೆಗೊಂಡ. ಅವನೂ ಕವಿಯೇ ಆಗಿದ್ದವನು. ತಾನೇ ಗೀತಗೋವಿಂದದಂತೆಯೇ ತನ್ನದೊಂದು ಕಾವ್ಯವನ್ನು ರಚಿಸಿ, ಎಲ್ಲರೂ ಅದನ್ನೇ ಹಾಡಬೇಕೆಂದೂ ಜಯದೇವನ ಕಾವ್ಯವನ್ನು ಯಾರೂ ಹಾಡಬಾರದೆಂದೂ ನಿರ್ಬಂಧ ಮಾಡಿದ. ಊರಿನ ಗುಡಿಯಲ್ಲಿ ಒಂದು ಸಂಜೆ ಜಯದೇವನು ದೇವರೆದುರು ಹಾಡುತ್ತ ಕುಣಿಯುತ್ತ ಇರುವಾಗ, ದೊರೆಯು ಅಲ್ಲಿಗೆ ಬಂದ. ತನ್ನ ಕಾವ್ಯವನ್ನು ಕುರಿತಂತೆ ಜಯದೇವನೊಂದಿಗೆ ಮಾತುಕತೆಯಾಡುತ್ತಿರುವಾಗ, ಜಯದೇವನು "ತಮ್ಮ ಕಾವ್ಯವು ಪ್ರೌಢವಾಗಿಯೇ

ಇರಬಹುದು; ಆದರೆ ಭಕ್ತಿ ಭಾವ ನನ್ನ ಕಾವ್ಯದಲ್ಲಿರುವುದ-ರಿಂದ ದೇವರಿಗೆ ಅದೇ ಹೆಚ್ಚು ಪ್ರಿಯವಾದೀತು ಬೇಕಿದ್ದರೆ ಪರೀಕ್ಷೆ ಮಾಡಿ ನೋಡಿ!' ಎಂದು ಹೇಳಿದ.

'ಪರಂತು ಮತ್ ಕೃತೇನಾಯಂ ಯಥಾತುಷ್ಯತಿ ಕೇಶವಃ।
ನತಥಾ ತ್ವತ್ ಕೃತೇನಾಪಿ ಪರೀಕ್ಷಾ ಕ್ರಿಯತಾಮಿಹ॥'

ದೊರೆಯು ಆಗಲೆಂದು ಹೇಳಿ, ಆ ರಾತ್ರಿ ಗುಡಿಯಲ್ಲಿ ದೇವರೆದುರು ತನ್ನ ಕಾವ್ಯವನ್ನೂ ಜಯದೇವನ ಕಾವ್ಯವನ್ನೂ ಪಕ್ಕಪಕ್ಕ ಇರಿಸಿ, ಬಾಗಲನ್ನು ಭದ್ರಗೊಳಿಸಿ ರಾತ್ರಿಯನ್ನು ಗುಡಿಯ ಹಜಾರದಲ್ಲೇ ಕಳೆದನು. ಮುಂಜಾನೆ ಗುಡಿಯ ಬಾಗಲನ್ನು ತೆರೆದು ನೋಡುವಾಗ, ತನ್ನ ಕಾವ್ಯವು ಕೆಳಗೂ, ಅದರ ಮೇಲೆ ಜಯದೇವನ ಕಾವ್ಯವೂ ಇದ್ದುವು!

ದೊರೆಯ ಮನಸ್ಸಿಗೆ ಇದು ಬೇಸರವನ್ನು ತಂದಿತು. ಆ ದಿನವೂ ರಾತ್ರಿಯೂ ಅನ್ನ ನೀರನ್ನು ಬಿಟ್ಟು ಅಲ್ಲಿಯೇ ಕುಳಿತುಬಿಟ್ಟ ('ತತ್ಯಾಜಾನ್ನಂಚ ಪಾನೀಯಂ, ರಾತ್ರೌ ತತ್ರೈವ ತಸ್ಥಿವಾನ್'). ಅಂದು ರಾತ್ರಿ ಮಲಗಿರುವಾಗ ಅವನಿಗೊಂದು ಕನಸು ಬಿದ್ದಿತು. ಗುಡಿಯೊಡೆಯನಾದ ಪುರುಷೋತ್ತಮನು ಅವನಿಗೆ ಕಾಣಿಸಿಕೊಂಡು 'ಈ ದುಗುಡವೇತಕ್ಕೆ? ನೀನು ನನ್ನ ಭಕ್ತನೇ ನಿಟ. ಆದರೆ ಜಯದೇವನ ಕಾವ್ಯದಂತೆ ಬೇರೊಂದು ಕಾವ್ಯ ಇರುವುದು ಸಾಧ್ಯವಿಲ್ಲ. ನಿನ್ನ ಕಾವ್ಯವೂ ಚೆನ್ನಾಗಿದೆ; ಆದರೆ ಜಯದೇವನ ಕಾವ್ಯಕ್ಕೆ ಹೋಲಿಸುವುದಾಗದು. ನೀನೂ ಅದನ್ನು ಶ್ರೇಷ್ಠವಾದುದೆಂದು ಸ್ವೀಕರಿಸು. ಅದರಿಂದ ನಿನಗೇ ಹಿತವಾದೀತು!' ಎಂದು ಹೇಳಿ ಮರೆಯಾದಂತೆ ಕನಸು. ಎಚ್ಚರಗೊಂಡ ಮೇಲೆ ದೊರೆಯು ಜಯದೇವನನ್ನು ಸನ್ಮಾನಿಸಿ, ಅವನಿಂದ ಉಪದೇಶವನ್ನು ಪಡೆದುಕೊಂಡನೆಂದು ಕತೆ.

ಕಾವ್ಯದಲ್ಲಿ ಕಾವ್ಯಪದ್ಧತಿಗಿಂತ ಭಕ್ತಿಭಾವಕ್ಕೆ ಬೆಲೆಯು ಹೆಚ್ಚಿನದೆಂದು ಕತೆಯ ಆಶಯ. ಗೀತಗೋವಿಂದ ಕಾವ್ಯದ ಜನಪ್ರೀತಿಯನ್ನು ಹೇಳುವ ಇಂಥ ಕತೆಗಳು ಹಲವಾರಿವೆ. ಇವುಗಳಲ್ಲೊಂದು ತರಕಾರಿ ಮಾಡುವ ಹೆಂಗಸೊಬ್ಬಳನ್ನು (ಶಾಕ ವಿಕ್ರಯಿಣಿ) ಕುರಿತದ್ದು. ಶರತ್ಕಾಲದ ಬೆಳದಿಂಗಳ ರಾತ್ರಿಯೊಂದರಲ್ಲಿ ಈ ಹೆಣ್ಣು ಮಗಳು ಮರುದಿನದ ವ್ಯಾಪಾರಕ್ಕೆಂದು ತೋಟದಲ್ಲಿ ಗುಳ್ಳದ ಕಾಯಿಗಳನ್ನು ಕಿತ್ತು ಮಕ್ಕರಿಯಲ್ಲಿ ತುಂಬಿಕೊಳ್ಳುತ್ತಿದ್ದಳು ಹಾಗೆಯೇ ಗೀತಗೋವಿಂದ ಕಾವ್ಯದ 'ರತಿಸುಖಸಾರೇ ಗತಮಭಿಸಾರೇ ಮದನಮನೋಹರ ವೇಶಂ' ಎಂಬ ಗೀತವನ್ನು ಹಾಡಿಕೊಳ್ಳುತ್ತ ತನ್ನ ಕೆಲಸ ಮಾಡುತ್ತಿದ್ದಳು. ಅವಳ ಗಾಯನದ ಇಂಪು, ಕಾವ್ಯದ ಮಾಧುರ್ಯ ಎರಡಕ್ಕೂ ಮನಸೋತು ಊರಿನ ಗುಡಿಯ ದೇವರು ಪುರುಷೋತ್ತಮನ ಅಲ್ಲಿಗೆ ಬಂದು ತೋಟದಲ್ಲಿ ಅವಳ ಹಿಂದೆಯೇ ಅಡ್ಡಾಡುತ್ತಿದ್ದನು. ಗಿಡದ ಮುಳ್ಳಿಗೆ ಅವನ ಪೀತಾಂಬರವೆಲ್ಲ ಸಿಕ್ಕು ಹರಿಯಿತು. ಆ ಹೆಣ್ಣು ಮಗಳ ಕಾಯಿ ತರಕಾರಿಯನ್ನು ಹೆಕ್ಕಿಕೊಂಡು ತನ್ನ ಮನೆಗೆ ಹಿಂದಿರುಗಿದಳು. ದೇವರೂ ತನ್ನ ಗುಡಿಗೆ ಹಿಂದಿರುಗಿದ. ಮರುದಿನ ಮುಂಜಾನೆ ಪೂಜಾರಿಯು ಗುಡಿ ಬಂದು, ಬಾಗಿಲನ್ನು ತೆಗೆದು ನೋಡಲು ದೇವರ ಪೀತಾಂಬರವೆಲ್ಲ ಹರಿದ ಚಿಂದಿಯಾಗಿದ್ದಿತು. ಅವನು ಅಚ್ಚರಿಗೊಂಡು ಊರ ದೊರೆಗೆ ದೂರನ್ನೊಯ್ದ ದೇವರ ಬಟ್ಟೆ ಹರಿದಿದ್ದು ಹೇಗೆಂದು ಯಾರಿಗೂ ತಿಳಿಯಲಿಲ್ಲ. ಕಡೆ ದೊರೆಯ ಕನಸಲ್ಲಿ ದೇವರು ಕಾಣಿಸಿಕೊಂಡು ನಡೆದ ಸಂಗತಿಯನ್ನು ತಿಳಿಸಿದ

'ಇತಸ್ತತೋ ಹ್ಯಧಾವಂಸ್ತು
ತತೋ ವೃಂತಾಕ ಕಂಟಕೈಃ।
ಖಂಡಶಃ ಸ್ಫುಟಿತಂ ವಸ್ತ್ರಂ
ಸತ್ಯಮೇತನ್ನ ಸಂಶಯಃ॥

ಅನಂತರ ಆ ತರಕಾರಿ ಮಾರುವವಳನ್ನು ಹುಡುಕಿ, ಕರೆಸಿಕೊಂಡ ಊರವರೆಲ್ಲ ನೆರೆದು ಆದರದಿಂದ ಸನ್ಮಾನ ಮಾಡಿದರಂತೆ.

ಸಂಸ್ಕೃತ - ಸಂಸ್ಕೃತಿ - ಸಂಪತ್ತು

ಸಂಸ್ಕೃತ ಸಾಹಿತ್ಯದಲ್ಲಿ ಪದಲಾಲಿತ್ಯಕ್ಕೆ ಪ್ರಸಿದ್ಧವಾದ ಕಾವ್ಯ ಗೀತಗೋವಿಂದ. ಇದನ್ನು 'ಅಷ್ಟಪದಿ' ಎಂದೂ ವ್ಯವಹರಿಸಿ, ಗಾಯನಕ್ಕೆ, ನರ್ತನಕ್ಕೆ, ನಾಟಕಕ್ಕೆ ಅದನ್ನು ಅಳವಡಿಸುವ ಪದ್ಧತಿ ಉಂಟು.

ವೈಷ್ಣವಬಾಹುಳ್ಯವಿರುವ ಕ್ಷೇತ್ರಗಳಲ್ಲಿ ಮಾರ್ಗಶೀರ್ಷ ಮಾಸದ ಹೊತ್ತಿಗೆ 'ರಾಧಾಮಾಧವ ವಿವಾಹ'ವೆಂಬ ಉತ್ಸವವನ್ನು ಉತ್ಸಾಹದಿಂದ ನಡೆಸುವ ಸಂಪ್ರದಾಯ ಉಂಟು. ಉತ್ತರದ ರಾಧಾಕೃಷ್ಣ ಪಂಥೀಯರಿಗೆ, ಭಾವುಕರಿಗೆ, ಭಕ್ತಜನಕ್ಕೆ, ರಸಿಕರಿಗೆ ಗೀತಾಗೋವಿಂದದಿಂದ ಒದಗಿದ, ಒದಗುವ ಸ್ಫೂರ್ತಿ ಬಹಳ.

ಸಂಸ್ಕೃತ ಸಾಹಿತ್ಯದಲ್ಲೇ ಇದನ್ನು ಅನುಕರಿಸಿದ ಹಲವಾರು ಅಷ್ಟಪದಿಗಳುಂಟು; ಆದರೆ, ಇದರಷ್ಟು ಜನಪ್ರಿಯವಾದ, ಸುಂದರವಾದ ಇನ್ನೊಂದು ಅಷ್ಟಪದಿಯಿಲ್ಲ.

ಪ್ರತಿಗಳಿಗೆ ಸಂಪರ್ಕಿಸಬೇಕಾದ ವಿಳಾಸ :
ಪುಸ್ತಕ ಭಾರತಿ, ಭಾರತೀಯ ವಿದ್ಯಾಭವನ
ರೇಸ್ ಕೋರ್ಸ್ ರಸ್ತೆ, ಬೆಂಗಳೂರು-560 001.

ಬೆಲೆ ರೂ. 20/-